# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಮಾರ್ಚ್ 17, 2021

ಸಂಪುಟ : 47 ಸಂಚಿಕೆ : 317 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಆಜಾದಿ ಕಿ ಅಮೃತ ಮಹೋತ್ಸವಕ್ಕೆ ದಾವಣಗೆರೆ ಜಿಲ್ಲಾ ಪಂಚಾಯ್ತಿ ಆಯ್ಕೆ

### ಅಪೌಷ್ಟಿಕತೆಯಿಂದ ತಾಯಂದಿರ ಸಂರಕ್ಷಿಸಲು ಪೋಷಣ್ ಪಕ್ವಾಡ್ ಅಭಿಯಾನ ಆರಂಭ

ದಾವಣಗೆರೆ, ಮಾ.16 - ಸ್ವಾತಂತ್ರ್ಯ ಲಭಿಸಿ 75 ವರ್ಷ ಸಂದ ಹಿನ್ನೆಲೆಯಲ್ಲಿ 'ಆಜಾದಿ ಕಿ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಹೋತ್ಸವ ನಡೆಸಲು ಆಯ್ಕೆಯಾದ ರಾಜ್ಯದ 4 ಜಿಲ್ಲಾ ಪಂಚಾಯ್ತಿಗಳ ಪೈಕಿ ದಾವಣಗೆರೆ ಜಿ.ಪಂ. ಸಹ ಒಂದಾಗಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಒ ಡಾ.ವಿಜಯ ಮಹಾಂತೇಶ ಬಿ. ದಾನಮ್ಮನವರ ಹೇಳಿದರು.

ಮಂಗಳವಾರ ಕೆಡಿಪಿ ಸಭೆಗೂ ಮುನ್ನ ಆಯೋಜಿಸಲಾಗಿದ್ದ ಪೋಷಣ್ ಪಕ್ವಾಡ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಅವರು ಮಾತನಾಡಿದರು.

2019 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯ ವಿಶೇಷ ಸಾಧನೆ ಆಧಾರದಲ್ಲಿ ದಾವಣಗೆರೆ ಜಿ.ಪಂ ಆಯ್ಕೆ ಮಾಡಲಾಗಿದ್ದು ಈ ಮಹೋತ್ಸವದ ಅಂಗವಾಗಿ ಗ್ರಾಮ ಪಂಚಾಯ್ತಿಗಳಲ್ಲಿ ಏನೆಲ್ಲ ಕಾರ್ಯಕ್ರಮಗಳನ್ನು ಮಾಡಬೇಕೆಂಬ ಯೋಜನೆ ರೂಪಿಸುತ್ತಿದ್ದೇವೆ ಎಂದರು.

ಈ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳನ್ನು ಬ್ರಾಂಡ್ ಅಂಬಾಸಿಡರ್ ಆಗಿ ಆಯ್ಕೆ ಮಾಡಬೇಕಿದೆ. ಕುಡಿಯುವ ನೀರು, ಇಂಧನ ನವೀಕರಣ ಮತ್ತು (2ನೇ ಪುಟಕ್ಕೆ)

# ರಾತ್ರಿ ಕರ್ಫ್ಯೂ: ಇಂದು ನಿರ್ಧಾರ

## ಪ್ರಧಾನಿ ಜೊತೆ ಸಿಎಂ ಚರ್ಚೆಯ ನಂತರ ಪ್ರಮುಖ ನಿರ್ಧಾರ ಸಾಧ್ಯತೆ

ಬೆಂಗಳೂರು, ಮಾ. 16 - ರಾಜ್ಯದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ಕೈಗೊಂಡ ಬಿಗಿ ಕ್ರಮ ಹಾಗೂ ಆಯ್ದ ನಗರಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸುವ ಸಂಬಂಧ ಸರ್ಕಾರ ನಾಳೆ ಬುಧವಾರ ಮಹತ್ವದ ತೀರ್ಮಾನ ಕೈಗೊಳ್ಳಲಿದೆ.

ಕೊರೊನಾ ಎರಡನೇ ಅಲೆಯ ಸ್ಪಷ್ಟ ಸುಳಿವಿನ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ನೀಡಿರುವ ಕೆಲವು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಿದೆ.

ಪ್ರಧಾನಿ ನರೇಂದ್ರ ಮೋದಿ ನಾಳೆ ಸಂಜೆ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಕೊರೊನಾ ಸೋಂಕಿಗೆ ಸಂಬಂಧಿಸಿದಂತೆ ವಿಡಿಯೋ ಕಾನ್ಫರೆನ್ಸಿಂಗ್ ನಡೆಸುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರದ ಸಲಹೆ-ಸೂಚನೆಗಳನ್ನು ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿನ್ನೆ ಸಂಜೆ ಕೊರೊನಾ ಎರಡನೇ ಅಲೆ ನಿಯಂತ್ರಿಸುವ ಸಂಬಂಧ ತಜ್ಞರು ಮತ್ತು ಅಧಿಕಾರಿಗಳ ಜೊತೆ ಪೂರ್ವಭಾವಿ ಸಭೆ ನಡೆಸಿದ್ದಾರೆ.

**ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಹಾಗೂ ಇತರೆ ಯಾವುದಾದರೂ ಪರೀಕ್ಷೆಗಳು ನಡೆಯುತ್ತಿದ್ದರೆ, ಅಂತಹವುಗಳಿಗೆ ವಿನಾಯಿತಿ ನೀಡಿ, ಮುಂದಿನ ಎರಡು ವಾರಗಳ ಕಾಲ ಅಂದರೆ 15 ದಿನ ಶಾಲಾ-ಕಾಲೇಜು ಮುಚ್ಚುವುದೂ ಸೇರಿದಂತೆ 11 ಶಿಫಾರಸ್ಸುಗಳನ್ನು ತಜ್ಞರ ಸಮಿತಿ ಸರ್ಕಾರಕ್ಕೆ ನೀಡಿದೆ.**

ತಜ್ಞರ ಸಮಿತಿ ಈಗಾಗಲೇ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದು, ಅವುಗಳನ್ನು ಮುಂದಿನ 15 ದಿನಗಳ ಕಾಲ ಅನುಷ್ಠಾಗೊಳಿಸಬೇಕೆಂದು ಹೇಳಿದೆ. ಆದರೆ, ಮುಖ್ಯಮಂತ್ರಿ ಅವರು, ಶಿಫಾರಸ್ಸುಗಳಲ್ಲಿ ಕೆಲವನ್ನು ನಿನ್ನೆಯೇ ರಾಜ್ಯದ ಜನತೆ (2ನೇ ಪುಟಕ್ಕೆ)

### ರಾತ್ರಿ ಕರ್ಫ್ಯೂ, ಲಾಕ್‌ಡೌನ್‌ನಿಂದ ಪ್ರಯೋಜನ ಇಲ್ಲ ಎಂದ ಕೇಂದ್ರ

ನವದೆಹಲಿ, ಮಾ. 16 – ಮಹಾರಾಷ್ಟ್ರದಲ್ಲಿ ಕೊರೊನಾದ ಎರಡನೇ ಅಲೆ ಆರಂಭವಾಗುವ ಹಂತದಲ್ಲಿದೆ ಎಂದು ಕೇಂದ್ರ ಸರ್ಕಾರ ರವಾನಿಸಿದ್ದ ತಂಡ ವರದಿ ಸಲ್ಲಿಸಿದೆ.

ಮಹಾರಾಷ್ಟ್ರದಲ್ಲಿ ಸೋಂಕಿತರನ್ನು ಗುರುತಿಸಲು, ಪರೀಕ್ಷಿಸಲು, ಪ್ರತ್ಯೇಕಿಸಲು ಹಾಗೂ ಕ್ವಾರಂಟೈನ್‌ನಲ್ಲಿ ಇರಿಸಲು ಹೆಚ್ಚು ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ಕೇಂದ್ರ ತಂಡದ ವರದಿ ಆಧರಿಸಿ ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದಿರುವ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ರಾತ್ರಿ ಕರ್ಫ್ಯೂ, (2ನೇ ಪುಟಕ್ಕೆ)

## ನೀರಿಗಾಗಿ ತಾಲ್ಲೂಕುಗಳಿಗೆ 50 ಲಕ್ಷ ರೂ. ಅನುದಾನ



ಬೆಂಗಳೂರು, ಮಾ.16 - ಬೇಸಿಗೆ ಪರಿಸ್ಥಿತಿ ಎದುರಿಸಲು ಸಜ್ಜಾಗಿದ್ದು, ಈ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಎಲ್ಲ ತಾಲ್ಲೂಕುಗಳಿಗೆ ತಲಾ 25 ರಿಂದ 50 ಲಕ್ಷ ರೂ.ಗಳನ್ನು ಸರ್ಕಾರ ಬಿಡುಗಡೆ ಮಾಡಿದೆ.

ವಿಧಾನಸಭೆಯಲ್ಲಿಂದು ಶೂನ್ಯ ವೇಳೆಯಲ್ಲಿ ಸದಸ್ಯ ಎ.ಟಿ.ರಾಮಸ್ವಾಮಿ ಪ್ರಸ್ತಾಪಕ್ಕೆ ಉತ್ತರಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, ರಾಜ್ಯದಲ್ಲಿ ಬೇಸಿಗೆಯ ತೀವ್ರತೆ ಹೆಚ್ಚಾಗಿದೆ, ಕುಡಿ ಯುವ ನೀರಿನ ಸಮಸ್ಯೆಯೂ ತಲೆದೋರಿದೆ, ಸಮಸ್ಯೆ ಪರಿಹಾರಕ್ಕೆ ಸರ್ಕಾರ ತ್ವರಿತ ಕ್ರಮಗಳನ್ನು ಕೈಗೊಂಡಿದೆ ಎಂದರು.

ಕಳೆದ 3 ವರ್ಷಗಳಿಂದ ಬರಗಾಲಕ್ಕೀಡಾಗಿರುವ ತಾಲ್ಲೂಕುಗಳಿಗೆ 50 ಲಕ್ಷ ರೂ. ಒದಗಿಸಲಾಗಿದೆ, ಈ ಪೈಕಿ 35 ಲಕ್ಷ ರೂ. ಟಾಸ್ಕ್ ಫೋರ್ಸ್‌ಗೆ ನೀಡಲಾಗುತ್ತದೆ, ಉಳಿದ 15 ಲಕ್ಷ ರೂ.ಗಳನ್ನು ಸಿಇಓಗಳಿಗೆ ಒದಗಿಸಲಾಗುತ್ತದೆ. ಇದೇ ರೀತಿ 2 ವರ್ಷಗಳಿಂದ ಬರಗಾಲಕ್ಕೀಡಾಗುತ್ತಿರುವ ತಾಲ್ಲೂಕುಗಳಿಗೆ ತಲಾ 35 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು ಟಾಸ್ಕ್ ಫೋರ್ಸ್‌ಗಳಿಗೆ 25 ಲಕ್ಷ ರೂ., ಸಿಇಓಗಳಿಗೆ 10 ಲಕ್ಷ ರೂ. ಒದಗಿಸಲಾಗುವುದು ಎಂದು ತಿಳಿಸಿದರು.

ಒಂದು ವರ್ಷ ಬರಗಾಲಕ್ಕೀಡಾದ ತಾಲ್ಲೂಕುಗಳಿಗೆ ತಲಾ 25 ಲಕ್ಷ ರೂ.ಗಳನ್ನು ಒದಗಿಸಲಾಗುವುದು, ಈ ಪೈಕಿ ಟಾಸ್ಕ್ ಫೋರ್ಸ್‌ಗಳಿಗೆ 15 ಲಕ್ಷ ರೂ. ಮತ್ತು ಸಿಇಓಗಳಿಗೆ 10 ಲಕ್ಷ ರೂ. ಒದಗಿಸಲಾಗುವುದು. (2ನೇ ಪುಟಕ್ಕೆ)

### ಕೋವ್ಯಾಕ್ಸಿನ್ ಲಸಿಕೆ ಪಡೆದ ತರಳಬಾಳು ಶ್ರೀ



ಬೆಂಗಳೂರು, ಮಾ.16- ಇಲ್ಲಿನ ವಿಕ್ಟೋರಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಕೋವ್ಯಾಕ್ಸಿನ್ ಲಸಿಕೆ ಪಡೆದರು.

ಲಸಿಕೆ ಪಡೆಯಲು ಯಾರೂ ಭಯ ಪಡಬೇಕಾಗಿಲ್ಲ. ಸೂಜಿ ಚುಚ್ಚುವುದು ಗೊತ್ತೇ ಆಗುವುದಿಲ್ಲ. ಇರುವೆ ಕಚ್ಚಿದಷ್ಟೂ ನೋವು ಆಗುವುದಿಲ್ಲ ಎಂದು ತಮ್ಮ ಸ್ವಾನುಭವದಿಂದ ಹೇಳಿದ ಶ್ರೀಗಳು, ಕೊರೊನಾ (2ನೇ ಪುಟಕ್ಕೆ)

## ಪಾರ್ಕ್ ಜಾಗದಲ್ಲಿ ಮನೆ ದೂಡಾದಿಂದ ಜಾಗ ಹದ್ದುಬಸ್ತು

ದಾವಣಗೆರೆ, ಮಾ.16- ನಗರದ ಬಸವೇಶ್ವರ ಬಡಾವಣೆಯ ಉದ್ಯಾನವನದ ಜಾಗದಲ್ಲಿ ಮನೆಗಳ ನಿರ್ಮಾಣದ ಹಿನ್ನೆಲೆಯಲ್ಲಿ ಇಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ನೇತೃತ್ವದಲ್ಲಿ ಸ್ಥಳ ಪರಿಶೀಲಿಸಿ, ಜಾಗವನ್ನು ಹದ್ದುಬಸ್ತು ಮಾಡಲಾಯಿತು.

ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಎಇಇ ಶ್ರೀಕರ್, ಸುದಯ್‌ಕುಮಾರ್ ಅವರೊಂದಿಗೆ ಬಸವೇಶ್ವರ ಬಡಾವಣೆಯಲ್ಲಿನ ಉದ್ಯಾನವನದ ಜಾಗವನ್ನು ಪರಿಶೀಲಿಸಿದ ದೂಡಾ ಅಧ್ಯಕ್ಷರು, ನಿರ್ಮಾಣ ಹಂತದಲ್ಲಿದ್ದ ಎರಡು ಮನೆಗಳ ಸುತ್ತ ಹದ್ದುಬಸ್ತು ಮಾಡಿಸಿದರು.

ಡೋರ್ ನಂಬರ್ 3509/236 ಹಾಗೂ 3509/ ಹೆಚ್ 238 ರ ಎರಡೂ ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ದೂಡಾ ಸ್ವತ್ತಿನಲ್ಲಿರುವ ಉದ್ಯಾನಕ್ಕೆ ಮೀಸಲಾದ 25 ಸಾವಿರ ಅಡಿ ಜಾಗದಲ್ಲಿ 10 ಸಾವಿರ ಅಡಿ ಅಳತೆಯಲ್ಲಿ ಇವು ನಿರ್ಮಿತವಾಗುತ್ತಿವೆ. ಒಂದು ಮನೆಯ ಮಾಲೀಕರು, ಕಟ್ಟಡ ನಿರ್ಮಾಣ ಪರವಾನಗಿಯನ್ನೇ ಪಡೆದಿಲ್ಲ. ಮತ್ತೊಬ್ಬ ಮಾಲೀಕರು ಪಡೆದಿದ್ದ ಕಟ್ಟಡ ನಿರ್ಮಾಣ ಪರವಾನಗಿಯನ್ನು (2ನೇ ಪುಟಕ್ಕೆ)

## ಮಾಸ್ಕ್ ಜಾಗೃತಿ ಮೂಡಿಸಿದ ಡಿಸಿ

### ಕೋವಿಡ್ ನಿಯಮ ಚಾಚೂ ತಪ್ಪದೇ ಪಾಲಿಸಲು ಕರೆ



ದಾವಣಗೆರೆ, ಮಾ.16- ಕೊರೊನಾ ಎರಡನೇ ಅಲೆ ಅಪ್ಪಳಿಸುವ ಸಾಧ್ಯತೆ ಇದ್ದು, ಒಂದು ವೇಳೆ ಅಪ್ಪಳಿಸಿದರೆ ಮತ್ತೊಮ್ಮೆ ಲಾಕ್‌ಡೌನ್ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ. ಆದ್ದರಿಂದ ಕೋವಿಡ್ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚನೆ ನೀಡಿದರು.

ಕೋವಿಡ್ ಸೋಂಕು ಹರಡದಂತೆ ತಡೆಯಲು ನಗರದಲ್ಲಿ ಹಮ್ಮಿಕೊಂಡಿದ್ದ ಕೊರೊನಾ ಜಾಗೃತಿ ಮತ್ತು ಮಾಸ್ಕ್ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಅಂಗಡಿ ಹಾಗೂ ಬಸ್ ಮಾಲೀಕರಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿಗಳು ತಮ್ಮಲ್ಲಿಗೆ ಬರುವ ಗ್ರಾಹಕರಿಗೆ ಕಡ್ಡಾಯವಾಗಿ ಮಾಸ್ಕ್ ಧರಿಸಲು ಸೂಚಿಸಬೇಕು. ಒಂದು ವೇಳೆ ಮಾಸ್ಕ್ ಧರಿಸದೇ ಇದ್ದಲ್ಲಿ ತಾವೇ ಜವಾಬ್ದಾರರಾಗಬೇಕಾಗುತ್ತದೆ. ತಮ್ಮ ಅಂಗಡಿಗಳನ್ನು (2ನೇ ಪುಟಕ್ಕೆ)

## ಸಿ.ಡಿ. ಪ್ರಕರಣ: ಬಿಜೆಪಿ-ಕಾಂಗ್ರೆಸ್ ಕೆಸರೆರೆಚಾಟ

ಬೆಂಗಳೂರು, ಮಾ. 16 - ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿ.ಡಿ. ಹಗರಣ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಕೆಸರೆರೆಚಾಟಕ್ಕೆ ಕಾರಣವಾಗಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸದೆ, ಬಿಜೆಪಿ ಟ್ವೀಟ್‌ನಲ್ಲಿ ಅವರ ವಿರುದ್ಧ ಆರೋಪ ಮಾಡಿದೆ.

ಘಟನೆಯ ಹಿಂದೆ ಜೈಲಿನಿಂದ ಜಾಮೀನಿನ ಮೇಲೆ ಹೊರಗಡೆ ಬಂದಿರುವ ಒಬ್ಬ ಭ್ರಷ್ಟಾಚಾರ ಆರೋಪಿ ಮಹಾ ನಾಯಕನ ಕೈವಾಡ ಇದೆ ಎಂದು ಹೇಳಲಾಗಿದೆ.

ಆ ಮಹಾನಾಯಕ ಕೂಡಾ ತನ್ನನ್ನು ಸಿಲುಕಿಸುವ ಕುತಂತ್ರ ನಡೆಯುತ್ತಿದೆ ಎಂದು ಹೇಳುವ ಮೂಲಕ ಹೆಗಲು ಮುಟ್ಟಿ ನೋಡಿಕೊಂಡಿದ್ದಾರೆ.

ರಾಹುಲ್ ಗಾಂಧಿ ಏಕೆ ಸುಕನ್ಯಾ ದೇವಿಯ ಪರವಾಗಿ ಒಮ್ಮೆಯೂ ಧ್ವನಿ ಎತ್ತಿಲ್ಲ ಎಂದು ಪರೋಕ್ಷವಾಗಿ ರಾಜ್ಯದ ಕೆಲವು ಕಾಂಗ್ರೆಸ್ ನಾಯಕರ ಮೇಲೆ ಬಿಜೆಪಿ ಹರಿಹಾಯ್ದಿದೆ. ಇದಕ್ಕೆ ತೀವ್ರವಾಗಿ ಟ್ವೀಟ್ ಮೂಲಕವೇ ಬಿಜೆಪಿ ವಿರುದ್ಧ ಕಾಂಗ್ರೆಸ್ ಸರಣಿ ಟ್ವೀಟ್ ಮಾಡಿ, ಆ ಪಕ್ಷದ ನಾಯಕರ ವರ್ತನೆ ವಿರುದ್ಧ ಟೀಕಿಸಿದೆ. 'ನಿಮ್ಮ ಶ್ರೀನಿವಾಸ್ ಪ್ರಸಾದ್ ಹೇಳಿದಂತೆ ವಾಮಮಾರ್ಗದ ಸರ್ಕಾರ, (2ನೇ ಪುಟಕ್ಕೆ)

### ಸಿ.ಡಿ. ಪ್ರಕರಣ : ಉತ್ತರ ಪಡೆಯಲ್ಲ ಎಂದ ಶಾಸಕ ಪರಮೇಶ್ವರ ನಾಯ್ಕ


ಬೆಂಗಳೂರು, ಮಾ. 16 - ರಾಸಲೀಲೆ ಸಿ.ಡಿ. ಪ್ರಕರಣ ವಿಧಾನ ಸಭೆಯಲ್ಲಿಂದು ಪ್ರತಿಫಲಿಸಿ ಭಾರೀ ಗೊಂದಲಕ್ಕೆ ಎಡೆ ಮಾಡಿಕೊಟ್ಟಿತು. ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಪಿ.ಟಿ.ಪರಮೇಶ್ವರ ನಾಯ್ಕ ಹಾಗೂ ಡಾ. ಯತೀಂದ್ರ ಕ್ರೀಡೆಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದರು.

ಯುವಜನ ಮತ್ತು ಕ್ರೀಡಾ ಸಚಿವ ನಾರಾಯಣ ಗೌಡ ಉತ್ತರ ನೀಡಲು ಮುಂದಾದಾಗ ಇಬ್ಬರೂ ಶಾಸಕರು ಪ್ರತಿಭಟಿಸಿ, ತಮ್ಮ ರಾಸಲೀಲೆ ಸಿ.ಡಿ. ಬಹಿರಂಗವಾಗಬಹುದೆಂಬ ಕಾರಣಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ನಿಮ್ಮಿಂದ ನಾವು ಉತ್ತರ ತೆಗೆದುಕೊಳ್ಳುವುದಿಲ್ಲ ಎಂದರು. (5ನೇ ಪುಟಕ್ಕೆ)




ಲಿಂ॥ ಶರಣೆ ಸುಲೋಚನಮ್ಮ ಬಿಂದಪ್ಪ ಸಿದ್ದಪ್ಪ
ದಾವಣಗೆರೆ
ಜನನ : 01-02-1946 ಲಿಂಗೈಕ್ಯ : 10-03-2021

॥ ಶ್ರೀ ಸಿದ್ದೇಶ್ವರ ಪ್ರಸನ್ನ ॥



ಕೈಲಾಸ ಶಿವಗಣಾರಾಧನೆ

ಶ್ರೀಮತಿ ಮಹಾಲಕ್ಷ್ಮಿ, ಶ್ರೀ ಕೆ.ಜಿ. ವೀರಬಸಪ್ಪ
ಎಂಸಿಸಿ 'ಎ' ಬ್ಲಾಕ್, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ನನ್ನ ಸಹೋದರಿ
ಶಾಮನೂರು ದಿ॥ ಬಿಂದಪ್ಪ ಸಿದ್ದಪ್ಪನವರ ಧರ್ಮಪತ್ನಿ
ಶರಣೆ ಸುಲೋಚನಮ್ಮ ಬಿಂದಪ್ಪ ಸಿದ್ದಪ್ಪ
ಇವರು, ದಿನಾಂಕ 10-03-2021 ರ ಬುಧವಾರ ಬೆಳಗ್ಗೆ 10.30 ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ - ತತ್ಸಂಬಂಧವಾದ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 18-03-2021 ರ ಗುರುವಾರ ಬೆಳಗ್ಗೆ 10.30 ಗಂಟೆಗೆ
ಶ್ರೀ ಆಂಜನೇಯ ಸಮುದಾಯ ಭವನ, ಶಾಮನೂರು,
ದಾವಣಗೆರೆ ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ
ಕೆ.ಜಿ. ಬಸವನಗೌಡ್ರು, ಜಿ.ಪಂ. ಮಾಜಿ ಸದಸ್ಯರು, ಕಕ್ಕರಗೊಳ್ಳ ಮತ್ತು ಸಹೋದರರು, ಸಹೋದರಿಯರು ಹಾಗೂ ಮಕ್ಕಳು
ಶ್ರೀಮತಿ ಸ್ಮಿತಾ, ಶ್ರೀ ಸುಜಿತ್ ಜಿ.ವಿ. ಮತ್ತು ಪುಟಾಣಿ ದಿಶಾ,
ಬಿಂದಪ್ಪ ಮನೆತನದವರು, ಶಾಮನೂರು ಮತ್ತು ಗೌಡ್ರು ಮನೆತನದವರು, ಕಕ್ಕರಗೊಳ್ಳ
ಮೊ : 99025 69999, ಫೋ. : 08192 – 226321

ಹುಟ್ಟುಹಬ್ಬದ ಶುಭಾಶಯಗಳು



ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರೂ, ಅಭಿವೃದ್ಧಿಯ ಹರಿಕಾರರೂ, ಕ್ರೀಡಾಪಟುಗಳ ಕಣ್ಮಣಿಗಳೂ, ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, ನಮ್ಮೆಲ್ಲರ ಆತ್ಮೀಯರೂ ಆದ
ಶ್ರೀ ದಿನೇಶ್ ಕೆ. ಶೆಟ್ಟಿ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.



✦ ಶಿವ ಆರ್.ಎಂ.ಸಿ. ✦ ಶಿವಗಂಗಾ ಕ್ರಷರ್
✦ ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್
✦ ಶಿವಗಂಗಾ ಗ್ರೂಪ್ ಹಾಗೂ
✦ ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್

## ಮಲೇಬೆನ್ನೂರಿನಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರು, ಮಾ.16- ಪಟ್ಟಣದ ಶ್ರೀ ಬಸವೇಶ್ವರ ದೇವರ ರಥೋತ್ಸವವು ನಾಡಿದ್ದು ದಿನಾಂಕ 18ರ ಗುರುವಾರ ಸಂಜೆ 4.30 ಕ್ಕೆ ಜರುಗಲಿದೆ.

ರಥೋತ್ಸವದ ಅಂಗವಾಗಿ ಮಂಗಳವಾರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ದೇವರ ಸಣ್ಣ ಉತ್ಸವ ಜರುಗಿತು. ನಾಳೆ ದಿನಾಂಕ 17 ರ ಬುಧವಾರ ಬೆಳಿಗ್ಗೆ ವಿವಿಧ ಪೂಜೆಗಳ ನಂತರ ಸಣ್ಣ ಉತ್ಸವ ನಡೆಯಲಿದ್ದು, ರಾತ್ರಿ 9 ಕ್ಕೆ ಮಹಾರಥಕ್ಕೆ ಕಳಸಾರೋಹಣ ಮಾಡಲಾಗುವುದು.

ದಿನಾಂಕ 18 ರ ಗುರುವಾರ ಬೆಳಿಗ್ಗೆ 8 ಕ್ಕೆ ಸಣ್ಣ ಉತ್ಸವ, 9 ಗಂಟೆಗೆ ರಥಕ್ಕೆ ತೈಲಾಭಿಷೇಕ, ಮಧ್ಯಾಹ್ನ 12 ರಿಂದ ದೇವಸ್ಥಾನದಲ್ಲಿ ಶ್ರೀಮತಿ ದೇವೀರಮ್ಮ ಸ್ಮರಣಾರ್ಥ ದಾಸೋಹ ಏರ್ಪಡಿಸಲಾಗಿದೆ. ಸಂಜೆ 4.30 ಕ್ಕೆ ಶ್ರೀ ಬೀರಲಿಂಗೇಶ್ವರ ಕಾರಣಿಕೋತ್ಸವ ನಡೆಯಲಿದೆ. ನಂತರ ಊರ ದೇವರುಗಳ ಸಮ್ಮುಖದಲ್ಲಿ ಶ್ರೀ ಬಸವೇಶ್ವರ ದೇವರ ಮಹಾ ರಥೋತ್ಸವ ಜರುಗುವುದು.

## ಕೈದಾಳೆಯಲ್ಲಿ ನಾಳೆ ರಥೋತ್ಸವ

ದಾವಣಗೆರೆ, ಮಾ.16- ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ನಾಡಿದ್ದು ದಿನಾಂಕ 18 ರಂದು ಬೆಳಿಗ್ಗೆ 8 ಗಂಟೆಗೆ ನೆರವೇರಲಿದೆ. ರಥೋತ್ಸವ ಪ್ರಯುಕ್ತ ನಾಳೆ 17ರ ಬುಧವಾರ ಬೆಳಿಗ್ಗೆ 7.30 ರಿಂದ ಗಜ ಉತ್ಸವದೊಂದಿಗೆ ಬನ್ನಿ ಮಂಟಪ ಪೂಜೆ ನೆರವೇರಲಿದೆ. ರಾತ್ರಿ 10.30 ಕ್ಕೆ ರಥದ ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮವಿದ್ದು, ರಾತ್ರಿ 11 ರಿಂದ ಶ್ರೀ ಸ್ವಾಮಿಯ ರಥಕ್ಕೆ ಅರಿಶಿಣ ಎಣ್ಣೆ ಧಾರಣೆ ನಡೆಯಲಿದೆ.

ದಿನಾಂಕ 18 ರ ಗುರುವಾರ ಬೆಳಿಗ್ಗೆ 8 ರಿಂದ 9 ಗಂಟೆವರೆಗೆ ಸ್ವಾಮಿಯ ಮಹಾ ರಥೋತ್ಸವ ನೆರವೇರಲಿದೆ. ನಂತರ ಜಾನಪದ ಕಲಾವಿದರಾದ ಪುರವಂತರ ನೃತ್ಯ, ಸಮಾಳಗಳ ಸಪ್ಪಳ, ಒಡಪುಗಳ ಸದ್ದಿನಲ್ಲಿ ವಾದ್ಯಗಳ ಝೇಂಕಾರ ಹಾಗೂ ಡೊಳ್ಳು ಕುಣಿತದೊಂದಿಗೆ ಬನ್ನಿ ಮಂಟಪ ದರ್ಶನ ಹಾಗೂ ಪೂಜಾ ಕಾರ್ಯಕ್ರಮದ ನಂತರ ಶ್ರೀ ಸ್ವಾಮಿಯು ಮರಡಿ ತಿಮ್ಮಪ್ಪ ಸ್ವಾಮಿಯ ಬೆಟ್ಟದಲ್ಲಿ ಪೂಜಾ ದರ್ಶನವಿದೆ.

ಅಂದು ಮಧ್ಯಾಹ್ನ 1 ರಿಂದ ಜವಳ ಕಾರ್ಯಕ್ರಮ, ಮಧ್ಯಾಹ್ನ 3 ರಿಂದ ಜೋಡಿ ಬಸವಗಳ ಹಾಗೂ ಗ್ರಾಮದ ಟ್ರ್ಯಾಕ್ಟರ್‌ಗಳ ಮೂಲಕ ಮೆರವಣಿಗೆಯೊಂದಿಗೆ ಪಾನಕ ವಿತರಣೆ ಮಾಡಲಾಗುವುದು. ಸಂಜೆ 5 ಗಂಟೆಗೆ ಅಗ್ನಿಕುಂಡ ಪೂಜೆ ಮತ್ತು ಓಕಳಿ ನಡೆಯಲಿದೆ. ರಾತ್ರಿ 9.30 ರಿಂದ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ, ಪುರವಂತರ ಒಡಪು ಗೀತೆಗಳೊಂದಿಗೆ ಮುಂಜಾನೆ 2.30 ಕ್ಕೆ ಬ್ರಾಹ್ಮೀ ಮುಹೂರ್ತದಲ್ಲಿ ಸ್ವಾಮಿಯ ನಡೆ ಮಡಿಯೊಂದಿಗೆ ಅಗ್ನಿಕುಂಡ ಪ್ರವೇಶ ನಡೆಯಲಿದೆ. ಮಾರ್ಚ್ 19 ರ ಶುಕ್ರವಾರ ಸಂಜೆ 5 ಗಂಟೆಗೆ ಸ್ವಾಮಿಗೆ ದಿಬ್ಬಣ ಕಾರ್ಯಕ್ರಮವಿರುತ್ತದೆ. ರಾತ್ರಿ 9 ಗಂಟೆಗೆ ರಸಮಂಜರಿ ಕಾರ್ಯಕ್ರಮವಿದೆ ಎಂದು ಟ್ರಸ್ಟ್ ತಿಳಿಸಿದೆ.

## ರಾತ್ರಿ ಕರ್ಫ್ಯೂ : ಇಂದು ನಿರ್ಧಾರ

**(1ನೇ ಪುಟದಿಂದ)** ಮುಂದಿಟ್ಟಿದ್ದಾರೆ. ಕಠಿಣ ನಿಯಮಗಳ ಜಾರಿ ಸಂಬಂಧ ಪ್ರಧಾನಮಂತ್ರಿ ಅವರ ಜೊತೆ ಸಂವಾದ ನಡೆಸಿದ ನಂತರ ತೀರ್ಮಾನ ಕೈಗೊಳ್ಳಲು ನಿರ್ಧರಿಸಿದ್ದಾರೆ. ಪ್ರಸಕ್ತ 31ನೇ ಮಾರ್ಚ್‌ವರೆಗೆ ಸಿನೆಮಾ ಹಾಗೂ ಮಾಲ್‌ಗಳಲ್ಲಿ ಶೇಕಡ 50 ರಷ್ಟು ಮಾತ್ರ ಸಾಮಾಜಿಕ ಅಂತರ ಪಾಲನೆಯೊಂದಿಗೆ ಪ್ರವೇಶಕ್ಕೆ ಮಿತಿಗೊಳಿಸಬೇಕು.

ಬೇಸಿಗೆಯಲ್ಲಿ ನಡೆಯಲಿರುವ ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಜನ ಸೇರುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಮದುವೆ, ಜನ ಸೇರುವ ಸಮಾರಂಭಗಳಿಗೆ ಕಡ್ಡಾಯವಾಗಿ ಜನ ಮಿತಿಯನ್ನು ಜಾರಿಗೊಳಿಸಬೇಕು ಮತ್ತು ಇಂತಹ ಸಮಾರಂಭಗಳ ಮೇಲೆ ನಿಗಾ ವಹಿಸಬೇಕು. ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಪ್ರಯಾಣಿಕರ ಸಂಖ್ಯೆಯನ್ನು ಕನಿಷ್ಠಕ್ಕೆ ಮಿತಿಗೊಳಿಸಬೇಕು.

ಮುನ್ನೆಚ್ಚರಿಕೆಯಾಗಿ ಮತ್ತೆ ಕೊರೊನಾ ಆಸ್ಪತ್ರೆಗಳನ್ನು ವ್ಯವಸ್ಥೆ ಮಾಡಬೇಕು ಹಾಗೂ ಈ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕ ಮತ್ತು ಆಕ್ಸಿಜನ್ ವ್ಯವಸ್ಥೆ ಸಿದ್ಧವಾಗಿಡಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಜೊತೆಗೆ ಮಾಸ್ಕ್ ಧರಿಸುವುದನ್ನು ಬಿಗಿಗೊಳಿಸಿ, ಖಾತ್ರಿ ಪಡಿಸಿಕೊಳ್ಳಬೇಕು ಎಂಬುದು ಸೇರಿದಂತೆ ಹಲವು ಶಿಫಾರಸ್ಸುಗಳನ್ನು ಮಾಡಲಾಗಿದೆ.


ಪ್ರಧಾನಿ ಅವರು ನಾಳೆ ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಯಾವ ಆದೇಶ ಸೂಚಿಸುವರೋ ಅವುಗಳನ್ನು ಜಾರಿಗೆ ತರಲು ಸರ್ಕಾರ ಸಿದ್ಧತೆ ನಡೆಸಿದೆ.

ಲಾಕ್‌ಡೌನ್‌ನಂತಹ ಕ್ರಮಗಳನ್ನು ಜಾರಿಗೊಳಿಸುವುದರಿಂದ ರಾಜ್ಯ ಮತ್ತೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ತಪ್ಪಿಸಲು ಸೋಂಕು ನಿಯಂತ್ರಣ ಕ್ರಮಗಳನ್ನು ಬಿಗಿಗೊಳಿಸಲು ಸರ್ಕಾರ ಮುಂದಾಗಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಸುಧಾಕರ್, ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳದಿದ್ದರೆ ಕಠಿಣ ಕ್ರಮ ಅನಿವಾರ್ಯ ಎಂದು ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿಂದು ವಿದ್ಯುತ್ ವ್ಯತ್ಯಯ

ತಾಲ್ಲೂಕಿನ ಎಣ್ಣೆಹೊಸಳ್ಳಿ, ಕರೂರು, ಹುಲಿಕಟ್ಟಿ ವಡೆರಾಯನಹಳ್ಳಿ, ಖಂಡೇರಾಯನಹಳ್ಳಿ, ಹೂವಿನಮರಡಿ ಹಾಗೂ ನದಿಹರಳಹಳ್ಳಿ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

॥ ಶ್ರೀ ಬನಶಂಕರಿ ದೇವಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ಶ್ರೀಮತಿ ಶ್ರೀ ಚಂದ್ರಶೇಖರ್ ನಿಂ. ಬ್ಯಾಡಗಿ ಹಾಗೂ ಸಹೋದರರು ಮಾಡುವ ವಿಜ್ಞಾಪನೆಗಳು. ನಮ್ಮ ಪೂಜ್ಯ ತಂದೆಯವರಾದ

**ಶ್ರೀ ನಿಂಗಪ್ಪ ರಾಮಣ್ಣ ಬ್ಯಾಡಗಿ**

ಇವರು ದಿನಾಂಕ 05.03.2021 ನೇ ಶುಕ್ರವಾರ ಮಧ್ಯಾಹ್ನ 4.00 ಗಂಟೆಗೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಆದ ಕಾರಣ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 17.03.2021ನೇ ಬುಧವಾರ ಮಧ್ಯಾಹ್ನ 1 ಘಂಟೆಗೆ ಬೇತೂರು ರೋಡ್, ಫಸ್ಟ್ ಮೇನ್, ಫಸ್ಟ್ ಕ್ರಾಸ್ ಬನಶಂಕರಿ ನಿಲಯದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿ.

ಇಂತಿ ದುಃಖತಪ್ತರು

**ಪತ್ನಿ ಹಾಗೂ ಶ್ರೀಮತಿ ಶ್ರೀ ಚಂದ್ರಶೇಖರ ನಿಂ. ಬ್ಯಾಡಗಿ ಹಾಗೂ ಸಹೋದರರು ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು**

**ಎರಡನೇ ವರ್ಷದ ಸವಿನೆನಪು**



**ಶ್ರೀಮತಿ ದಿ॥ ಎಂ.ಎಂ.ಸೌಭಾಗ್ಯಲಕ್ಷ್ಮಿ**

ನೀವು ನಮ್ಮನ್ನಗಲಿ ಎರಡು ವರ್ಷಗಳು ಸಂದವು

ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀಮತಿ ವಿದ್ಯಾಶ್ರೀ ಪಿ ಮತ್ತು ಎಂ.ಎಂ.ರವಿಚಂದ್ರ

ಶ್ರೀಮತಿ ಎಂ.ಎಂ.ಛಾಯಾ ಮತ್ತು ರಜತ್ ಬಿ.ಆರ್

ಶ್ರೀಮತಿ ಎಂ.ಎಂ.ರಾಜಲಕ್ಷ್ಮಿ ಮತ್ತು ಶ್ರೀ ಪವನಕುಮಾರ

ಶ್ರೀಮತಿ ಎಂ.ಎಂ.ಸರಸ್ವತಿ ಮತ್ತು ಶ್ರೀ ರುದ್ರೇಶ

ಮೊಮ್ಮಕ್ಕಳಾದ ಆರ್ವಿ ಎಂ.ಆರ್., ರಿಷನ್ ವಿಷ್ಣು ಬಿ.ಆರ್, ವಿವಾನ್ ಪಿ.ಎಸ್., ಸಾಂಚು ಪ್ರಣವ್ ಆರ್.ಬಿ

**ಎಂ.ಆರ್.ಮಂಜುನಾಥ ಶೆಟ್ಟಿ & ಸನ್ಸ್**

667/1 ಕೆನರಾ ಬ್ಯಾಂಕ್ ಎದುರು, ಕೆ.ಆರ್.ರಸ್ತೆ, ದಾವಣಗೆರೆ-577001. ಫೋ: 08192-276731


# 2ನೇ ದಿನವೂ ಬ್ಯಾಂಕ್ ಮುಷ್ಕರ: ಉದ್ಯೋಗಿಗಳ ಮತ ಪ್ರದರ್ಶನ




ದಾವಣಗೆರೆ, ಮಾ.16- ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣ ವಿರೋಧಿಸಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯು ದೇಶವ್ಯಾಪಿ ಕರೆ ನೀಡಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲೂ 2 ದಿನಗಳು ಬ್ಯಾಂಕ್ ಮುಷ್ಕರ ನಡೆಯಿತು.

ಇಂದು ಸಹ ಸೇವೆಯಿಂದ ಹೊರಗುಳಿದಿದ್ದ ಬ್ಯಾಂಕ್ ಉದ್ಯೋಗಿಗಳು ನಗರದ ಮಂಡಿಪೇಟೆಯ ಕೆನರಾ ಬ್ಯಾಂಕ್ ಮುಂಭಾಗದಲ್ಲಿ ಪ್ರತಿಭಟನಾ ಮತ ಪ್ರದರ್ಶನ ನಡೆಸಿ, ಕೇಂದ್ರ ಸರ್ಕಾರದ ಖಾಸಗೀಕರಣ ನೀತಿ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ಸರ್ಕಾರದ ಗಮನ ಸೆಳೆದರು.

ಬ್ಯಾಂಕ್ ಖಾಸಗೀಕರಣ ನಿರ್ಧಾರ ಹಿಂಪಡೆಯಬೇಕು. ಸಾರ್ವಜನಿಕ ಬ್ಯಾಂಕುಗಳು ದೇಶದ ಆಸ್ತಿ, ಅವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಬ್ಯಾಂಕ್ ಸೌಲಭ್ಯ ಪ್ರತಿಯೊಬ್ಬ ಭಾರತೀಯನ ಮೂಲಭೂತ ಹಕ್ಕಾಗಬೇಕು. ಸಾರ್ವಜನಿಕ ಬ್ಯಾಂಕ್ ವ್ಯವಸ್ಥೆಯನ್ನು ಇನ್ನಷ್ಟು ವಿಸ್ತಾರಗೊಳಿಸಬೇಕೇ ವಿನಃ ಖಾಸಗೀಕರಣದ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸಂಕುಚಿತಗೊಳಿಸಬಾರದು ಎಂದು ಪ್ರತಿಭಟನಾ ನಿರತರು ಆಗ್ರಹಿಸಿದರು.

ಜಿಲ್ಲಾ ಸಂಚಾಲಕ ಕೆ.ಎನ್. ಗಿರಿರಾಜ್ ಮಾತನಾಡಿ, ಬ್ಯಾಂಕುಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಿಗೆ ಶೀಘ್ರವೇ ನೇಮಕಾತಿ ಮಾಡಿ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಬೇಕು. ವಿವಿಧ ಬ್ಯಾಂಕುಗಳಲ್ಲಿರುವ 148 ಲಕ್ಷ ಕೋಟಿ ಜನರ ಠೇವಣಿಗೆ ಸರ್ಕಾರವೇ ರಕ್ಷಣೆ ನೀಡಬೇಕೇ ಹೊರತು ಲೂಟಿಕೋರ ಬಂಡವಾಳ ಶಾಹಿಗಳಿಂದ ಸಾಧ್ಯವಿಲ್ಲ. ದೇಶಕ್ಕೆ ಮಾಸ್ ಬ್ಯಾಂಕಿಂಗ್‌ನ ಅಗತ್ಯವಿದೆಯೇ ಹೊರತು ಕ್ಲಾಸ್ ಬ್ಯಾಂಕಿಂಗ್‌ನ ಅಗತ್ಯವಿಲ್ಲ. ಸರ್ಕಾರ ಸೂಕ್ತವಾಗಿ ಸ್ಪಂದಿಸದಿದ್ದಲ್ಲಿ ಬ್ಯಾಂಕ್ ಖಾಸಗೀಕರಣದ ವಿರುದ್ಧದ ಹೋರಾಟ ಇನ್ನಷ್ಟು ತೀವ್ರಗೊಳ್ಳಲಿದೆ ಎಂದು ಎಚ್ಚರಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಮಾತನಾಡುತ್ತಾ, ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಇನ್ನಷ್ಟು ಬಲಗೊಳಿಸುವ ನಿಟ್ಟಿನಲ್ಲಿ ವಸೂಲಾಗದೇ ಇರುವ ಸಾಲವನ್ನು ವಸೂಲು ಮಾಡಲು ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಆದರೆ ಬ್ಯಾಂಕ್ ಉದ್ಯೋಗಿಗಳ ಹೋರಾಟದ ದಿಕ್ಕು ತಪ್ಪಿಸುವುದಕ್ಕಾಗಿ ಬ್ಯಾಂಕ್ ಖಾಸಗೀಕರಣದ ನಿರ್ಧಾರವನ್ನು ಪ್ರಕಟಿಸಿರುವುದು ಸರಿಯಲ್ಲ ಎಂದು ಖಂಡಿಸಿದರು.

ಗ್ರಾಮೀಣ ಬ್ಯಾಂಕ್ ನೌಕರರ ಮತ್ತು ಅಧಿಕಾರಿಗಳ ಸಂಘದ ಕೆ.ಹೆಚ್. ದಫ್ತೇರ್, ಎನ್‌ಓಬಿಬಿಓ ಸಂಘಟನೆಯ ನಾಯಕ ಎನ್. ರಾಮಮೂರ್ತಿ, ಎಐಬಿಓಸಿ ಸಂಘಟನೆಯ ಆನಂದಮೂರ್ತಿ, ಎಐಬಿಓಎ ಸಂಘಟನೆಯ ಪಿ.ಆರ್. ಪುರುಷೋತ್ತಮ್, ಎನ್‌ಸಿಬಿಇ ಸಂಘಟನೆಯ ಎಂ.ಎಸ್. ವಾಗೀಶ್, ಎನ್‌ಓಬಿಡಬ್ಲ್ಯು ಸಂಘಟನೆಯ ಎನ್. ಪ್ರಶಾಂತ್, ಬ್ಯಾಂಕ್ ನಿವೃತ್ತರ ಒಕ್ಕೂಟದ ಅಜಿತ್‌ಕುಮಾರ್ ನ್ಯಾಮತಿ ಹಾಗೂ ಜಿ.ಬಿ. ಶಿವಕುಮಾರ್ ಮಾತನಾಡಿದರು.

ಮುಷ್ಕರದಲ್ಲಿ ಕೆ. ವಿಶ್ವನಾಥ ಬಿಲ್ಲವ, ಹೆಚ್.ಜಿ. ಸುರೇಶ್, ಹೆಚ್.ಎಸ್. ತಿಪ್ಪೇಸ್ವಾಮಿ, ಕೆ. ಶಶಿಶೇಖರ್, ಎಂ.ಪಿ. ಕಿರಣಕುಮಾರ್, ಸಿ. ಪರಶುರಾಮ, ಕಾಡಜ್ಜಿ ವೀರಪ್ಪ, ಕೆ. ರವಿಶಂಕರ್, ಅಜಯ್‌ಕುಮಾರ್, ಸುರೇಶ್ ಚೌಹಾಣ್, ಶಿವಮೂರ್ತಿ ಪೂಜಾರ್, ನಿತ್ಯಾನಂದ ಡೋಂಗ್ರೆ, ಡಿ. ರಾಮಕೃಷ್ಣ, ಸಿ. ದುರುಗಪ್ಪ, ಸಿ.ಹೆಚ್.ಎಂ. ದೀಪಾ, ಎಸ್. ಪ್ರಶಾಂತ್, ಶಂಭು ಹಿರೇಮಠ್, ಐಶ್ವಯ ಕಠಾರೆ, ವಿ.ಆರ್. ಹರೀಶ್, ಎನ್.ಜಿ. ಉಷಾ, ಸಿದ್ದಲಿಂಗೇಶ್ ಕೋಡಿ, ಎಂ. ಬಸವರಾಜ್, ಪ್ರದೀಪ್‌ಕುಮಾರ್, ಹೆಚ್. ಪ್ರದೀಪ್, ಪಿ. ನಾಗರಾಜ್, ಮಹಮ್ಮದ್ ಫೈಯಾಜ್, ಬಿ.ಎನ್. ದರ್ಶನ್, ಸುಜಯಾ ನಾಯಕ್, ಕೆ. ಜಯಲಕ್ಷ್ಮಿ, ರೇಣುಕಮ್ಮ, ಸುಮಂತ್ ಭಟ್, ರೇಖಾ, ಗಾಯತ್ರಿ, ಎಸ್.ನಾಗರಾಜ್, ಟಿ. ಸುಭಾಷ್‌ಚಂದ್ರ, ನಾಗೇಶ್ವರಿ ಆರ್. ನಾಯರಿ, ಶಿವಕುಮಾರ್, ಎ. ವಿರುಪಾಕ್ಷಯ್ಯ, ಸಿದ್ದಾರ್ಥ, ಜಿ.ಎಸ್. ಹರೀಶ್, ಹೆಚ್.ಆರ್. ಮಂಜುನಾಥ್, ಜಿ.ಟಿ. ಹರೀಶ್, ಸಂಧ್ಯಾ, ಸಾವಿತ್ರಿ, ಸುನೀತ, ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದ ಅಜಿತ್‌ಕುಮಾರ್ ನ್ಯಾಮತಿ, ಜಿ.ಬಿ.ಶಿವಕುಮಾರ್, ಜೆ.ಓ. ಮಹೇಶ್ವರಪ್ಪ, ಅಯೂಬ್ ಆಲಿಖಾನ್, ರಘುನಾಥ್ ರಾವ್ ತಾಪ್ಸೆ ಮತ್ತಿತರರು ಭಾಗವಹಿಸಿದ್ದರು.

## ಸಾವಿರ ಕೋಟಿಯಷ್ಟು ಬ್ಯಾಂಕ್ ವ್ಯವಹಾರ ಸ್ಥಗಿತ

ದೇಶದಾದ್ಯಂತ ಖಾಸಗಿ ಬ್ಯಾಂಕುಗಳ ಸೇವೆಯನ್ನು ಹೊರತುಪಡಿಸಿ ಬ್ಯಾಂಕಿಂಗ್ ಸೇವೆ ಸಂಪೂರ್ಣ ಸ್ಥಗಿತಗೊಂಡಿತ್ತು. 10 ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಹಾಗೂ ಗ್ರಾಮೀಣ ಬ್ಯಾಂಕಿನ ಉದ್ಯೋಗಿಗಳು ಮುಷ್ಕರದಲ್ಲಿ ಭಾಗವಹಿಸಿದ್ದರು. ಅಂದಾಜಿನ ಪ್ರಕಾರ ಸುಮಾರು ಲಕ್ಷಾಂತರ ಕೋಟಿ ರೂ.ಗಳ ಬ್ಯಾಂಕ್ ವ್ಯವಹಾರ ಸ್ಥಗಿತಗೊಂಡಿತ್ತು. ಜಿಲ್ಲೆಯಲ್ಲಿನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಒಟ್ಟು 240 ಬ್ಯಾಂಕ್ ಶಾಖೆಗಳು ಬಂದ್ ಆಗಿದ್ದವು. ಇದರಿಂದ ಎರಡು ದಿನಗಳಲ್ಲಿ ಈ ಎಲ್ಲಾ ಶಾಖೆಗಳು ಸೇರಿ ಅಂದಾಜು ಸಾವಿರ ಕೋಟಿಯಷ್ಟು ಬ್ಯಾಂಕ್ ವ್ಯವಹಾರ ಸ್ಥಗಿತವಾಗಿದೆ. 1200 ಬ್ಯಾಂಕ್ ಉದ್ಯೋಗಿಗಳು ಸೇವೆಯಿಂದ ದೂರ ಉಳಿದಿದ್ದರು. ಸೇವೆ ಸಿಗದೇ ಗ್ರಾಹಕರು ಪರದಾಡಿದರು.

**ಹೋರಾಟಕ್ಕೆ ಬೆಂಬಲ:** ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಮುಷ್ಕರದಲ್ಲಿ ಪಾಲ್ಗೊಂಡು ಬ್ಯಾಂಕ್ ನೌಕರರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

# ಅಮೃತ ಮಹೋತ್ಸವಕ್ಕೆ ಜಿ.ಪಂ.ಆಯ್ಕೆ

**(1ನೇ ಪುಟದಿಂದ)** ತ್ಯಾಜ್ಯ ವಿಲೇವಾರಿ ಕುರಿತು ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸಬೇಕು. ಜೊತೆಗೆ ಈ ಸಭೆಯಲ್ಲಿ ಗ್ರಾ.ಪಂ ಅಭಿವೃದ್ದಿ ಯೋಜನೆಗಳ ಕ್ರಿಯಾ ಯೋಜನೆ ಸಿದ್ದಪಡಿಸಬೇಕಿದೆ ಹಾಗೂ ಆಜಾದಿ ಕಿ ಅಮೃತ್ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಪಾದಯಾತ್ರೆ, ಯೋಗಥಾನ್ ಮತ್ತು ಮ್ಯಾರಥಾನ್‌ಗಳನ್ನು ಆಯೋಜಿಸಲು ಕ್ರಿಯಾ ಯೋಜನೆ ಮಾಡಲಾಗುವುದು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್ ಅವರು ಪೋಷಣ್ ಅಭಿಯಾನದ ರೂಪುರೇಷೆಗಳನ್ನು ವಿವರಿಸಿದರು.

**ಪೋಷಣ್ ಪಕ್ವಾಡ್ :** ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಅಪೌಷ್ಟಿಕತೆಯಿಂದಾಗಿ ಹೆಚ್ಚುತ್ತಿರುವ ಸಾವು-ನೋವು ತಡೆಯುವ ಉದ್ದೇಶದಿಂದ ಮಾರ್ಚ್ 16 ರಿಂದ 31 ರವರೆಗೆ ವಿವಿಧ ದಿನಗಳಲ್ಲಿ ಪೋಷಣ್ ಅಭಿಯಾನ ಯೋಜನೆಯಡಿ ಪೋಷಣ್ ಪಕ್ವಾಡ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿ.ಪಂ ಅಧ್ಯಕ್ಷೆ ಕೆ.ವಿ.ಶಾಂತಕುಮಾರಿ ಹೇಳಿದರು.

ಮಂಗಳವಾರ ಕೆಡಿಪಿ ಸಭೆಗೂ ಮುನ್ನ ಆಯೋಜಿಸಲಾಗಿದ್ದ ಪೋಷಣ್ ಪಕ್ವಾಡ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಇವರಿಗೆ ಪೌಷ್ಟಿಕ ಆಹಾರ ನೀಡುವ ಮೂಲಕ ಅವರನ್ನು ರಕ್ತಹೀನತೆ ಮತ್ತು ಇತರೆ ಆರೋಗ್ಯ ಸಮಸ್ಯೆಯಿಂದ ಕಾಪಾಡಬೇಕಿದೆ. ಗ್ರಾಮಗಳಿಗೆ ಮೊದಲನೇ ಆದ್ಯತೆ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ತೋಟಗಾರಿಕೆ ಇಲಾಖೆಯಿಂದ ಪೌಷ್ಟಿಕಾಂಶಯುಕ್ತ ಹಣ್ಣು, ತರಕಾರಿ ಗಿಡಗಳನ್ನು ನೀಡಲಾಗುವುದು. ಈ ಗಿಡಗಳನ್ನು ನೆಟ್ಟು ಪೋಷಿಸಿ ಫಲ ಪಡೆಯಬೇಕು ಹಾಗೂ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪೋಷಣ್ ಅಭಿಯಾನದ ಕುರಿತು ಅರಿವು ಮೂಡಿಸಬೇಕೆಂದರು.

ಜಿ.ಪಂ. ಸಿಇಓ ಡಾ.ವಿಜಯ ಮಹಾಂತೇಶ ಬಿ.ದಾನಮ್ಮನವರ ಮಾತನಾಡಿ, ಗರ್ಭಿಣಿ ಮತ್ತು ಬಾಣಂತಿಯರಲ್ಲಿ ರಕ್ತಹೀನತೆ ಕಡಿಮೆ ಮಾಡುವ ಉದ್ದೇಶದಿಂದ ಈ ಅಭಿಯಾನವನ್ನು ಆರೋಗ್ಯ, ಆಯುಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕೈಗೊಳ್ಳಲಾಗಿದೆ ಎಂದರು.

ಅಂಗನವಾಡಿ ಆವರಣದಲ್ಲಿ ಔಷಧೀಯ ಹಾಗೂ ಹಣ್ಣಿನ ಕನಿಷ್ಟ 4 ಗಿಡಗಳನ್ನು ನೆಡಬೇಕು ಅಪೌಷ್ಟಿಕತೆ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಬೇಕು. ಆಯುಷ್ ಇಲಾಖೆಯಿಂದ ಯೋಗದ ಮಹತ್ವದ ಬಗ್ಗೆ ತಿಳಸಬೇಕು ಎಂದರು.

## ಮಾಸ್ಕ್ ಜಾಗೃತಿ

**(1ನೇ ಪುಟದಿಂದ)** ಮುಲಾಜಿಲ್ಲದೇ ಮುಚ್ಚಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕೋವಿಡ್ ನಿಯಂತ್ರಣ ಕೇವಲ ಸರ್ಕಾರದ ಕರ್ತವ್ಯವಲ್ಲ. ಪ್ರತಿಯೊಬ್ಬರೂ ತಮ್ಮ ಜೀ ವನ ಉಳಿಸಿಕೊಳ್ಳಲು ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕೆಂದರು.


ಮತ್ತೆ ಲಾಕ್‌ಡೌನ್‌ನಂತಹ ಪರಿಸ್ಥಿತಿ ನಿರ್ಮಾಣವಾದರೆ, ವ್ಯಾಪಾರ ವಹಿವಾಟು ಏರುಪೇರಾಗಲಿದ್ದು, ಇದನ್ನು ನಂಬಿಕೊಂಡವರ ಜೀವನ ದುಸ್ತರವಾಗಲಿದೆ ಎಂದು ಹೇಳಿದರು.

ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಸ್ಯಾನಿಟೈಜರ್ ಬಳಕೆ ಕಡ್ಡಾಯವಾಗಬೇಕೆಂದರು.

ಕೋವಿಡ್ ಸೋಂಕು ಹರಡದಂತೆ ನಡೆಸಿದ ಕೊರೊನಾ ಜಾಗೃತಿ ಕಾರ್ಯಕ್ರಮ ನಗರದ ಗುಂಡಿ ಸರ್ಕಲ್‌ನಿಂದ ಹೊರಟು ರಾಮ್ ಅಂಡ್ ಕೋ ಸರ್ಕಲ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಖಾಸಗಿ ಬಸ್ ನಿಲ್ದಾಣ, ಗಡಿಯಾರ ಕಂಬದ ಮುಖಾಂತರ ಸಾಗಿದ ಅಧಿಕಾರಿಗಳ ತಂಡ ಜಾಗೃತಿ ಮೂಡಿಸಿದರು.

ಎಸ್ಪಿ ಹನುಮಂತರಾಯ, ಸಿಇಒ ವಿಜಯ ಮಹಾಂತೇಶ್ ದಾನಮ್ಮನವರ್, ಡಿಹೆಚ್‌ಒ ಡಾ. ನಾಗರಾಜ್, ಡಿವೈಎಸ್ಪಿ ನಾಗೇಶ್ ಐತಾಳ್ ಮತ್ತಿತರರಿದ್ದರು.

## ಪಾರ್ಕ್ ಜಾಗದಲ್ಲಿ ಮನೆ



**(1ನೇ ಪುಟದಿಂದ)** ದೂಡಾ ಅಧಿಕಾರಿಗಳು ಮನವಿ ಸಲ್ಲಿಸಿ ಪಾಲಿಕೆ ವ್ಯಾಪ್ತಿಯಲ್ಲಿ ರದ್ದುಪಡಿಸಿದ್ದಾರೆ. ಪಾರ್ಕ್ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿರುವ ಬಗ್ಗೆ ಪ್ರಶ್ನಿಸಿ ದೂಡಾದಿಂದ ಇಬ್ಬರು ಮಾಲೀಕರಿಗೂ ನೋಟಿಸ್ ನೀಡಲಾಗಿತ್ತು. ಆದರೂ ಈವರೆಗೂ ಉತ್ತರ ಬಾರದ ಹಿನ್ನೆಲೆಯಲ್ಲಿ ಕಾನೂನು ತಜ್ಞರ ಸಲಹೆ ಪಡೆದು ಹದ್ದು ಬಸ್ತು ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ದೂಡಾ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಪಾರ್ಕ್‌ಗಳ ಒತ್ತುವರಿ ಜಾಗ ತೆರವುಗೊಳಿಸಲಾಗುತ್ತಿದೆ. ದೇವರಾಜ ಅರಸು ಬಡಾವಣೆ ವ್ಯಾಪ್ತಿಯಲ್ಲಿ ಈ ಹಿಂದೆ 15 ಗುಂಟೆ ಜಾಗವನ್ನು ಸ್ವಾಧೀನಕ್ಕೆ ಪಡೆಯಲಾಗಿತ್ತು. ಬಸವೇಶ್ವರ ಬಡಾವಣೆಯಲ್ಲೂ ಅಕ್ರಮವಾಗಿ ನಿರ್ಮಿಸಲಾದ ಮನೆಗಳನ್ನು ಪತ್ತೆ ಹಚ್ಚಿದ್ದು, ಮಾಲೀಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಲ್ಲದೆ ಡೋರ್ ನಂಬರ್ ರದ್ದತಿಗೆ ಬೆಂಗಳೂರು ಪ್ರಾದೇಶಿಕ ಕಚೇರಿಗೆ ಪತ್ರ ಬರೆಯಲಾಗುವುದು. ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡಿದ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಲಾಗುವುದು. ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿ 2 ತಿಂಗಳಲ್ಲಿ ತೆರವಿಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ನಗರಾಭಿವೃದ್ಧಿ (ಸಿಡಿಪಿ) ಯೋಜನೆ ಪ್ರಕಾರವೇ ಮನೆ ನಿರ್ಮಿಸಿದ್ದೇವೆ. ಪಾರ್ಕ್ ಜಾಗದಲ್ಲಿ ಕಟ್ಟಿಲ್ಲ. ಈ ಬಗ್ಗೆ ನಮ್ಮಲ್ಲಿ ದಾಖಲೆಗಳಿವೆ. ಕೋರ್ಟ್‌ನಲ್ಲಿ ದೂರು ದಾಖಲಿಸಿದ್ದೇವೆ. ನಮಗೆ ಇದುವರೆಗೆ ದೂಡಾದಿಂದ ಯಾವುದೇ ನೋಟಿಸ್ ಬಂದಿಲ್ಲ. ಕೋರ್ಟ್ ಮೂಲಕ ಉತ್ತರ ನೀಡುವುದಾಗಿ ಮನೆ ಮಾಲೀಕನ ಮಗ ಭರತ್ ಹೇಳಿದ್ದಾರೆ.

## ಲಸಿಕೆ ಪಡೆದ ತರಳಬಾಳು ಶ್ರೀ

**(1ನೇ ಪುಟದಿಂದ)** ಪಿಡುಗು ಹೋಗಲಾಡಿಸಲು ಲಸಿಕೆ ಪಡೆಯುವುದೇ ಏಕೈಕ ಮಾರ್ಗವಾಗಿದ್ದು, ಯಾವುದೇ ಭಯವಿಲ್ಲದೆ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ ಎಂದು ಕರೆ ನೀಡಿದರು.

'ಮನೆ ಗೆದ್ದು ಮಾರು ಗೆಲ್ಲು' ಎನ್ನುವಂತೆ ನಮ್ಮ ದೇಶದ ಎಲ್ಲ ಪ್ರಜೆಗಳಿಗೆ ಲಸಿಕೆಯನ್ನು ಕೊಡುವುದಲ್ಲದೆ ಜಗತ್ತಿನ ಅನೇಕ ರಾಷ್ಟ್ರಗಳಿಗೆ ಉಚಿತವಾಗಿ ಲಸಿಕೆಯನ್ನು ಪೂರೈಕೆ ಮಾಡುತ್ತಿರುವ ಭಾರತದ ಪ್ರಧಾನಿ ಮೋದಿಯವರ ಮಾನವೀಯ ದೃಷ್ಟಿಯನ್ನು ಶ್ರೀಗಳು ಶ್ಲಾಘಿಸಿದರು. ಇದು ಸಹಸ್ರಾರು ವರ್ಷಗಳ ಹಿಂದೆ 'ವಸುದೈವ ಕುಟುಂಬಕಮ್' ಎಂದು ಬೋಧಿಸಿದ ಉಪನಿಷತ್ತಿನ ಸೂಕ್ತಿಗೆ ಮತ್ತು 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲಸಂಗನ ಶರಣರೇ ಕುಲಜರು' ಎನ್ನುವ ಬಸವಣ್ಣನವರ ಆಶಯಕ್ಕೆ ಪೂರಕವಾಗಿದೆ. ಮನುಜ ಕುಲವನ್ನು ಸಂರಕ್ಷಿಸಿದ ಮಹಾನ್ ರಾಷ್ಟ್ರ ಭಾರತವಾಗಲಿದೆ ಎಂದು ಶ್ರೀಗಳು ಬಣ್ಣಿಸಿದ್ದಾರೆ.

## ಕರ್ಫ್ಯೂ ಪ್ರಯೋಜನ ಇಲ್ಲ

**(1ನೇ ಪುಟದಿಂದ)** ವಾರಾಂತ್ಯದ ಲಾಕ್‌ಡೌನ್‌ಗಳಿಂದ ಹೆಚ್ಚೇನೂ ಪ್ರಯೋಜನವಾಗುವುದಿಲ್ಲ. ರಾಜ್ಯ ಸರ್ಕಾರ ಕಠಿಣ ಸೋಂಕು ನಿಗ್ರಹ ಕ್ರಮಗಳು, ನಿಗಾ ವಹಿಸುವುದು ಹಾಗೂ ಟೆಸ್ಟ್ ಹೆಚ್ಚಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಪ್ರಸಕ್ತ ಆರೋಗ್ಯ ಮೂಲಭೂತ ಸೌಲಭ್ಯ ಸಮರ್ಪಕವಾಗಿದೆ. ಆದರೆ, ರಾಜ್ಯ ಸರ್ಕಾರ ಕಠಿಣ ಪರಿಸ್ಥಿತಿ ಎದುರಾದರೂ ನಿಭಾಯಿಸುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಕಳೆದ ಮಾರ್ಚ್ 7ರಿಂದ 11ರ ನಡುವೆ ಕೇಂದ್ರ ತಂಡ ಮಹಾರಾಷ್ಟ್ರಕ್ಕೆ ಭೇಟಿ ನೀಡಿತ್ತು. ಮುಂಬೈನಲ್ಲಿ ಕೊರೊನಾ ಟೆಸ್ಟ್ ಪಾಸಿಟಿವ್ ದರ ಶೇ.51ರಷ್ಟಿದ್ದದ್ದು, ಔರಂಗಾಬಾದ್‌ನಲ್ಲಿ ಶೇ.30 ಇದ್ದದ್ದನ್ನು ತಂಡ ಪರಿಗಣಿಸಿದೆ.

## ಜೂಜು : ಬಂಧನ

ದಾವಣಗೆರೆ, ಮಾ.16- ಚನ್ನಗಿರಿ ತಾಲ್ಲೂಕು ಹೊದಿಗೆರೆ ಗ್ರಾಮದ ಕೆರೆಯ ಬಳಿ ನಿನ್ನೆ ಇಸ್ಪೀಟ್ ಜೂಜಾಡುತ್ತಿದ್ದ ಐವರನ್ನು ಬಂಧಿಸಿದ ಪೊಲೀಸರು, 21 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

## ತಾಲ್ಲೂಕುಗಳಿಗೆ ಅನುದಾನ

**(1ನೇ ಪುಟದಿಂದ)** ಇನ್ನುಳಿದ ತಾಲ್ಲೂಕುಗಳಿಗೆ ತಲಾ 15 ಲಕ್ಷ ರೂ. ನೀಡಲಾಗುವುದು, ಈ ಪೈಕಿ ಟಾಸ್ಕ್ ಫೋರ್ಸ್‌ಗಳಿಗೆ 10 ಲಕ್ಷ ರೂ. ಮತ್ತು ಸಿಇಓಗಳಿಗೆ 5 ಲಕ್ಷ ರೂ. ಒದಗಿಸಲಾ ಗುವುದು ಎಂದು ಹೇಳಿದರು.

ಇದನ್ನು ಹೊರತುಪಡಿಸಿ ಇನ್ನೂ ಹೆಚ್ಚು ಹಣ ಬೇಕು ಎಂಬುದಾಗಿ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ಆರ್ಥಿಕ ಇಲಾಖೆಯಿಂದ ಸದ್ಯದಲ್ಲೇ ಇನ್ನಷ್ಟು ಹಣ ಬಿಡುಗಡೆಯಾಗುವ ನಿರೀಕ್ಷೆಯಿದೆ ಎಂದರು.

ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಬೇಸಿಗೆಯ ತೀವ್ರತೆ ಒಂದೇ ಸಮನೆ ಹೆಚ್ಚುತ್ತಿದೆ, ಈ ಸಮಯದಲ್ಲಿ ಕುಡಿಯುವ ನೀರು ಮತ್ತು ವಿದ್ಯುತ್ ಅಭಾವ ಕಾಣಿಸಿಕೊಳ್ಳುತ್ತಿದೆ, ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ವಿಷಯದ ಬಗ್ಗೆ ಇಷ್ಟೇ ಚರ್ಚೆ ಸಾಲುವುದಿಲ್ಲ, ಕುಡಿಯುವ ನೀರು ಮತ್ತು ವಿದ್ಯುತ್ ಪರಿಸ್ಥಿತಿ ಬಿಗಡಾಯಿಸದಂತೆ ನೋಡಿಕೊಳ್ಳಬೇಕಿದೆ, ಇದಕ್ಕಾಗಿ ಮತ್ತಷ್ಟು ಚರ್ಚೆ ಅಗತ್ಯವಿದ್ದು, ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡುತ್ತೇನೆ ಎಂದರು.

## ಬಿಜೆಪಿ-ಕಾಂಗ್ರೆಸ್ ಕೆಸರೆರೆಚಾಟ

**(1ನೇ ಪುಟದಿಂದ)** ನಿಮ್ಮವರೇ ಹೇಳಿದಂತೆ ಬ್ಲಾಕ್‌ಮೇಲ್ ಸಂಪುಟ, ಹನಿಟ್ರ್ಯಾಪ್ ಮೂಲಕ ಆಪರೇಷನ್ ಕಮಲ, ಯತ್ನಾಳ್ ಹೇಳಿದಂತೆ ಫ್ಯಾಮಿಲಿ ಸರ್ಕಾರ, ಇಂತಹ 'ದಂಡ'ದ ಸರ್ಕಾರಕ್ಕೆ 'ಮಾನ' ಎಲ್ಲಿದೆ, ತಾಕತ್ತಿದ್ದರೆ ಆಪರೇಷನ್ ಕಮಲದ ಸರ್ಕಾರ ವಿಸರ್ಜಿಸಿ ಚುನಾವಣೆಗೆ ಬನ್ನಿ ಎಂದು ಕಾಂಗ್ರೆಸ್ ಸವಾಲು ಹಾಕಿದೆ.

"ಜೈಲಿನಿಂದ ಜಾಮೀನಿನ ಮೇಲೆ ಹೊರಬಂದಿರುವ ಭ್ರಷ್ಟಾಚಾರ ಆರೋಪಿ ಮಹಾ ನಾಯಕ" ಎನ್ನುತ್ತ ಅವರತ್ತ ಏಕೆ ಪರೋಕ್ಷವಾಗಿ ಗುರಿ ಇಡುತ್ತಿದ್ದೀರಿ?!, ವಿಜಯೇಂದ್ರ ಸಿ.ಡಿ. ಫ್ಯಾಕ್ಟರಿ ಮೂಲಕ ಬ್ಲಾಕ್‌ಮೇಲ್ ಮಾಡಲಾಗುತ್ತದೆ ಎಂಬ ಮಾತನ್ನು ನೀವೂ ಪರೋಕ್ಷವಾಗಿ ಯಡಿಯೂರಪ್ಪ ವಿರುದ್ಧವೇ ಪ್ರಚಾರ ಮಾಡುತ್ತಾ ಅಭಿಯಾನ ಮುಂದುವರೆಸುತ್ತಿರುವಿರಾ! ಎಂದಿದೆ.

ವಿಧಾನಸೌಧದ ಸನಿಹದಲ್ಲಿಯೇ ಒಬ್ಬ ಶಾಸಕರಿಗೇ ರಕ್ಷಣೆ ನೀಡಲಾಗದ್ದು ನಿಮ್ಮ ಸರ್ಕಾರದ ವೈಫಲ್ಯವಲ್ಲವೇ? ಉದ್ಯೋಗ ಕೇಳಿದ ಯುವತಿಯನ್ನು ದುರುಪಯೋಗಪಡಿಸಿಕೊಂಡ ನಿಮ್ಮಿಂದ ಇಡೀ ರಾಜ್ಯಕ್ಕೆ ಕೆಟ್ಟ ಹೆಸರು. ರಕ್ಷಣೆ ಕೇಳಿದ ಆ ಯುವತಿಗಾದರೂ ರಕ್ಷಣೆ ಒದಗಿಸುವಿರಾ ಅಥವಾ ನಿಮ್ಮ ಮಹಿಳಾ ವಿರೋಧಿ ನಡೆ ಮುಂದುವರೆಸುವಿರಾ? ಎಂದು ಕಾಂಗ್ರೆಸ್ ಪ್ರಶ್ನಿಸಿದೆ.


## ಬಂಕಾಪುರ ಚನ್ನಬಸಪ್ಪ ಅವರಿಗೆ ಮಾತೃ ವಿಯೋಗ



ದಾವಣಗೆರೆ, ಮಾ.16- ಹಿರಿಯ ಪತ್ರಕರ್ತರೂ ಆದ ಕನ್ನಡ ಪರ ಚಳುವಳಿ ಹೋರಾಟಗಾರ ಬಂಕಾಪುರ ಚನ್ನಬಸಪ್ಪ ಅವರ ತಾಯಿ ಶ್ರೀಮತಿ ಪಾರ್ವತಮ್ಮ ಅವರು ಮುಂಜಾನೆ 5 ಗಂಟೆಗೆ ನಿಧನರಾದರು. ಮೃತರಿಗೆ ಸುಮಾರು 88 ವರ್ಷ ವಯಸ್ಸಾಗಿತ್ತು.

ಪಾರ್ವತಮ್ಮ, ದಿ. ಬಂಕಾಪುರದ ಗಣೇಶಪ್ಪ ಅವರ ಧರ್ಮಪತ್ನಿ. ಬಂಕಾಪುರ ಚನ್ನಬಸಪ್ಪ ಅವರೂ ಸೇರಿದಂತೆ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಿತು.

## ಅಪಘಾತ: ಹೆಡ್‌ಕಾನ್‌ಸ್ಟೇಬಲ್ ಸಾವು



ಹೂವಿನಹಡಗಲಿ, ಮಾ.16- ಎಪಿಎಂಸಿ ಬಳಿ ಇರುವ ಎಸ್.ಆರ್. ಪೆಟ್ರೋಲ್ ಬಂಕ್ ಬಳಿ ಅಪಘಾತ ಸಂಭವಿಸಿ ಪೊಲೀಸ್ ಕಾನ್‌ಸ್ಟೇಬಲ್ ಹೆಚ್.ಎಂ. ಶಿವಕುಮಾರಸ್ವಾಮಿ (43) ಮೃತಪಟ್ಟಿದ್ದಾರೆ.

ಶಿವಕುಮಾರ್ ತಮ್ಮ ಸ್ವಗ್ರಾಮ ಹೊಳಲಿಗೆ ತೆರಳುತ್ತಿದ್ದು, ಎದುರಿಗೆ ಇನ್ನೊಂದು ಮೋಟಾರು ಸೈಕಲ್‌ನಲ್ಲಿ ರಭಸವಾಗಿ ಬಂದ ಯುವಕ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ. ಮೃತ ಶಿವಕುಮಾರ ಸ್ವಾಮಿ ತಂದೆ, ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಹಡಗಲಿ ಠಾಣೆಯಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವಾಗಲೂ ಹೆಲ್ಮೆಟ್ ಧರಿಸುತ್ತಿದ್ದರು. ಬೆಲ್ಟ್ ಹಾಕಿರದ ಕಾರಣ ತಲೆಗೆ ಬಲವಾದ ಪೆಟ್ಟು ಬಿದ್ದು, ದುರ್ಮರಣಕ್ಕೀಡಾಗಿದ್ದಾರೆ. ಸಿಪಿಐ ಮತ್ತು ಪಿಎಸ್‌ಐ ಭೇಟಿ ನೀಡಿದ್ದು, ಪ್ರಕರಣ ದಾಖಲಾಗಿದೆ.

## ಪಾದಚಾರಿ ಮಹಿಳೆಯ ಸರ ಅಪಹರಣ

ದಾವಣಗೆರೆ, ಮಾ.16- ಪಾದಚಾರಿ ಮಹಿಳೆಯೋರ್ವರ ಬಂಗಾರದ ಮಾಂಗಲ್ಯ ಸರವನ್ನು ಕಳ್ಳರು ಬೈಕ್‌ನಲ್ಲಿ ಬಂದು ಅಪಹರಿಸಿರುವ ಘಟನೆ ನಗರದ ಬಡಾವಣೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಂದು ರಾತ್ರಿ ನಡೆದಿದೆ.

ಶರಣಮ್ಮ ಎಂಬುವರು ಸೊಸೈಟಿಯಿಂದ ವಾಪಸ್ ಮನೆ ಕಡೆಗೆ ಇಲ್ಲಿನ ವಿನೋಬನಗರ 4ನೇ ಮೇನ್ ಹಾಗೂ 3ನೇ ಕ್ರಾಸ್ ಬಳಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಪಲ್ಸರ್ ಬೈಕ್‌ನಲ್ಲಿ ಹೆಲ್ಮೆಟ್ ಹಾಗೂ ಮಾಸ್ಕ್ ಧರಿಸಿ ಬಂದಿದ್ದ ಕಳ್ಳರು ಬೈಕ್‌ನ ಲೈಟ್ ಬೆಳಕನ್ನು ಮುಖಕ್ಕೆ ಹರಿಸಿದ್ದು, ಇದರಿಂದ ಆಕೆಗೆ ಕಣ್ಣು ಮಂಜಾಗಿದ್ದು, ಕೊರಳಿಗೆ ಕೈ ಹಾಕಿ ಅಂದಾಜು 1.50 ಲಕ್ಷ ರೂ. ಮೌಲ್ಯದ ಬಂಗಾರದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ.

## ಆತ್ಮಹತ್ಯೆಗೆ ಶರಣಾದ ತಾಯಿ - ಮಗು

ದಾವಣಗೆರೆ, ಮಾ.16 ಹೊಟ್ಟೆ ನೋವಿನ ಹಿನ್ನೆಲೆ ತಾಯಿ ತನ್ನ 11 ತಿಂಗಳ ಮಗು ಸಹಿತ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚನ್ನಗಿರಿ ತಾಲ್ಲೂಕಿನ ದೊಡ್ಡೇರಿಕಟ್ಟೆ ಗ್ರಾಮದಲ್ಲಿ ನಡೆದಿದೆ.

ಶ್ವೇತಾ (28), ಜಾಹ್ನವಿ ಆತ್ಮಹತ್ಯೆಗೆ ಶರಣಾದವರು.


ತಾಯಿ ಶ್ವೇತಾಳಿಗೆ ಪದೇ ಪದೇ ಹೊಟ್ಟೆ ನೋವಿನ ಸಮಸ್ಯೆ ಬಾಧಿಸುತ್ತಿತ್ತು. ನೋವು ಸಹಿಸಲಾರದೇ ತನ್ನ ಹೆಣ್ಣು ಮಗುವಿಗೆ ನೇಣು ಬಿಗಿದು ತಾನೂ ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾಳೆ.

ಈ ಸಂಬಂಧ ಸಂತೆಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೌಟುಂಬಿಕ ಕಲಹ : ವ್ಯಕ್ತಿ ಆತ್ಮಹತ್ಯೆ

ದಾವಣಗೆರೆ, ಮಾ.16- ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ನಿಟುವಳ್ಳಿಯ ವಿಜಯಕುಮಾರ್ (32) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಟಿಜೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೀಲಾನಹಳ್ಳಿಯಲ್ಲಿ ನಾಳೆ ರಥೋತ್ಸವ



ದಾವಣಗೆರೆ, ಮಾ.16- ಸಮೀಪದ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 18 ರ ಗುರುವಾರ ಬೆಳಿಗ್ಗೆ 8.30 ಕ್ಕೆ ನಡೆಯಲಿದೆ.

ನಾಳೆ ದಿನಾಂಕ 17 ರ ಬುಧವಾರ ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರ ಆಗಮನವಾಗಲಿದೆ. ರಾತ್ರಿ ಅರಿಶಿಣ ಎಣ್ಣೆ ಕಾರ್ಯ ಜರುಗಲಿದೆ. ದಿನಾಂಕ 18 ರಂದು ಬೆಳಿಗ್ಗೆ 8.30 ಕ್ಕೆ ರಥೋತ್ಸವ ನಡೆಯಲಿದ್ದು, ಬೆಳಿಗ್ಗೆ 9.30 ರಿಂದ ಭಕ್ತಾದಿಗಳು ಹರಕೆ ತೀರಿಸುವರು, ಸಂಜೆ 5.30 ಕ್ಕೆ ಮುಳ್ಳುಗದ್ದಿಗೆ ಏರುವುದು, ಸಂಜೆ 6.30 ಕ್ಕೆ ಕಾರಣಿಕ ನುಡಿಯಲಿದ್ದು, ಭೂತ ಸೇವೆ, ಓಕಳಿ ಕಾರ್ಯ ಮತ್ತು ರಾತ್ರಿ 9.30 ಕ್ಕೆ ಗಂಗೆ ಪೂಜೆ ನೆರವೇರುವುದು.

## ರಾಮತೀರ್ಥ : ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ



ಮಲೇಬೆನ್ನೂರು, ಮಾ.16- ರಾಮತೀರ್ಥ ಗ್ರಾಮದಲ್ಲಿ 12 ಲಕ್ಷ ರೂ. ವೆಚ್ಚದ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಎಸ್. ರಾಮಪ್ಪ ಗುದ್ದಲಿ ಪೂಜೆ ನೆರವೇರಿಸಿದರು.


ಈ ಸಂದರ್ಭದಲ್ಲಿ ತಾ.ಪಂ. ಸದಸ್ಯೆ ಲಕ್ಷ್ಮಿ ಹಲಸಬಾಳು ಮಹಾಂತೇಶ್ ಅನುದಾನದಲ್ಲಿ ನಿರ್ಮಿಸಿರುವ ಹೈಮಾಸ್ಟ್ ದೀಪವನ್ನು ಶಾಸಕರು ಉದ್ಘಾಟಿಸಿದರು. ತಾ.ಪಂ. ಸದಸ್ಯೆ ಲಕ್ಷ್ಮಿ ಮಹಾಂತೇಶ್, ತಾ.ಪಂ. ಮಾಜಿ ಸದಸ್ಯ ಬೆಳ್ಳೂಡಿ ಬಸವರಾಜ್, ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಚೈತ್ರ ಲಂಕೇಶ್ ಮತ್ತು ಗ್ರಾ.ಪಂ. ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

## ನಗರದಲ್ಲಿ ಇಂದು ಜಾನಪದ ಸಂಭ್ರಮ

ವಿನೂತನ ಮಹಿಳಾ ಸಮಾಜದ ವತಿಯಿಂದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 3 ಗಂಟೆಗೆ ವಿನಾಯಕ ಬಡಾವಣೆ, ವಿದ್ಯಾನಗರ ರಸ್ತೆಯ ವರಸಿದ್ಧಿ ವಿನಾಯಕ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀಮತಿ ವೀಣಾ ನಂಜಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶ್ರೀಮತಿ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಶಾಂತ ಭಟ್ ಆಗಮಿಸಿ 'ಮಹಿಳೆ ಮತ್ತು ಮನೋಸ್ವಾಸ್ಥ್ಯ' ವಿಷಯ ಕುರಿತು ಉಪನ್ಯಾಸ ನೀಡುವರು. ಇದೇ ಸಂದರ್ಭದಲ್ಲಿ ಗ್ರಾಮೀಣ ಜನಪದ ಸೊಗಡಿನ ವಸ್ತುಪ್ರದರ್ಶನ ಏರ್ಪಡಿಸಲಾಗಿದೆ.

# ಸಮಾಜದಲ್ಲಿ ಬೆಳಕು ಚೆಲ್ಲುವ ಮಹಿಳೆಯರು



### ಹರಿಹರದಲ್ಲಿ ಸುಮತಿ ಜಯಪ್ಪ

ಹರಿಹರ, ಮಾ.16- ಸಮಾಜದಲ್ಲಿನ ಅಂಧಕಾರ ಹೋಗಲಾಡಿಸಿ ಅದ್ಭುತವಾದದ್ದನ್ನು ಸೃಷ್ಟಿಸುವುದರ ಜೊತೆಗೆ ಪುರುಷರಿಗೆ ಸರಿಸಮಾನವಾಗಿ ಅತ್ಯುತ್ತಮ ಕೆಲಸವನ್ನು ಮಾಡುವ ಮೂಲಕ ಸಮಾಜದಲ್ಲಿ ಬೆಳಕನ್ನು ಚೆಲ್ಲುವ ಕೆಲಸವನ್ನು ಮಹಿಳೆಯರು ಮಾಡುತ್ತಾರೆ ಎಂದು ಕುಂಬಳೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕಿ ಸುಮತಿ ಜಯಪ್ಪ ಅಭಿಪ್ರಾಯಪಟ್ಟರು.

ನಗರದ ಗುರುಭವನದಲ್ಲಿ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ವತಿಯಿಂದ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಶೈಕ್ಷಣಿಕ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಮಹಿಳೆಯರು ಅನೇಕ ರೀತಿಯಲ್ಲಿ ಶೋಷಣೆಗೆ ಒಳಗಾಗುವುದನ್ನು ಕಾಣುತ್ತಿದ್ದೇವೆ. ಆದರೆ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ಅಂಜದೆ, ಅಳುಕದೆ ಅದನ್ನು ಎದುರಿಸುವಂತಹ ಮನೋಭಾವನೆ ಬೆಳೆಸಿಕೊಂಡು ಬಾಳಬೇಕು ಎಂದು ಕರೆ ನೀಡಿದರು.

ಹಲವಾರು ವರ್ಷದ ಕೆಳಗೆ ಹೆರಿಗೆ ಮನೆಗೆ ಮತ್ತು ಅಡುಗೆ ಮನೆಗೆ ಸೀಮಿತವಾಗಿ ಮಹಿಳೆಯರನ್ನು ಕಾಣುತ್ತಿದ್ದೆವು. ಆದರೆ 12ನೇ ಶತಮಾನದಲ್ಲಿ ಬಸವಣ್ಣನವರು ಪುರುಷರು ಮತ್ತು ಮಹಿಳೆಯರ ನಡುವಿನ ಅಸಮಾನತೆ ವಿರುದ್ಧ ಹೋರಾಟ ಮಾಡಿ ಸ್ತ್ರೀ ಸಮಾನತೆಯ ಕಡೆ ಬೆಳಕನ್ನು ಚೆಲ್ಲುವ ಕೆಲಸದ ಜೊತೆಗೆ ಹೆಣ್ಣು ಭ್ರೂಣ ಹತ್ಯೆ, ಲೈಂಗಿಕ ಶೋಷಣೆ, ಲಿಂಗ ತಾರತಮ್ಯ ಮುಂತಾದವುಗಳನ್ನು ಹೋಗಲಾಡಿಸಿ ಅಸಮಾನತೆಯಿಂದ ಸಮಾನತೆಯ ಕಡೆಗೆ ತರುವಂತಹ ಕೆಲಸವನ್ನು ಮಾಡಿದರು ಎಂದು ತಿಳಿಸಿದರು.

ಬಿಇಓ ಯು. ಬಸವರಾಜಪ್ಪ ಮಾತನಾಡಿ, ವಿದ್ಯಾರ್ಥಿಗಳ ಉತ್ತಮ ಬದುಕನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರ ಮೇಲೆ ಇರುತ್ತದೆ. ಶಿಕ್ಷಕ ವೃತ್ತಿಯನ್ನು ಮಾಡುವಾಗ ಯಾವುದೇ ರೀತಿಯ ಅಪಚಾರವಾಗದಂತೆ ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ಮಾಡುವ ನಿಟ್ಟಿನಲ್ಲಿ ಶಿಕ್ಷಕರು ಹೆಜ್ಜೆಗಳನ್ನು ಹಾಕಬೇಕು. ಮಹಿಳೆಯರ ಶಿಕ್ಷಣ ಮತ್ತು ಹಕ್ಕುಗಳಿಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟ ಸಾವಿತ್ರಿ ಬಾಯಿ ಫುಲೆ ಅವರು ಮಹಿಳೆಯರ ಬೆಳವಣಿಗೆಗೆ ದಾರಿ ದೀಪವಾಗಿದ್ದರು ಎಂದು ಹೇಳಿದರು.


ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ರಾಜ್ಯಾಧ್ಯಕ್ಷೆ ಲತಾ ಎಸ್. ಮುಳ್ಳೂರು ಮಾತನಾಡಿ ಮಗುವಿನಿಂದ ಹಿಡಿದು ಹೆಣ್ಣುಮಕ್ಕಳು ಮಾಡುವಂತಹ ಸಾಧನೆಗಳಿಗೆ ಪುರುಷರು ಪ್ರೋತ್ಸಾಹ ನೀಡಿದಾಗ ಅವರು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಾಧಿಸಲು ಸಾಧ್ಯವಾಗುತ್ತದೆ. ಸಂಸಾರದಲ್ಲಿ ಹೆಣ್ಣು ಮತ್ತು ಗಂಡು ಎಂಬುದು ಸಮಾನರಾಗಿ ಸಾಗಿದಾಗ ಅಂತಹ ಕುಟುಂಬವು ಸಮಾಜದಲ್ಲಿ ಆರೋಗ್ಯವಂತ ಕುಟುಂಬವಾಗಿ ಸಾಗುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಸಾವಿತ್ರಿಬಾಯಿ ಫುಲೆ ಸಂಘದ ಪ್ರಧಾನ ಕಾರ್ಯದರ್ಶಿ ಪುಷ್ಪಾವತಿ ಜಿ.ಎಂ. ಮಾತನಾಡಿ, ಕೊರೊನಾ ಸಮಯದಲ್ಲಿ ತಾಲ್ಲೂಕಿನ ಹಲವಾರು ಗ್ರಾಮಗಳಿಗೆ ತೆರಳಿ ಸಾರ್ವಜನಿಕರಿಗೆ ಆಹಾರ ಕಿಟ್ , ಆರೋಗ್ಯ ತಪಾಸಣೆ ಮುಂತಾದ ಸಮಾಜಮುಖಿ ಕೆಲಸಗಳನ್ನು ಮಾಡಿದೆ. ಈ ವರ್ಷ ಸಾವಿತ್ರಿಬಾಯಿ ಫುಲೆ ಹೆಸರಿನಲ್ಲಿ ಸೇವಾ ತೃಪ್ತಿ ಅಭಿನಂದನಾ ಪ್ರಶಸ್ತಿ ಮತ್ತು ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಲಾಗುತ್ತದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ತಾಲ್ಲೂಕು ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷೆ ಹೆಚ್. ಜ್ಯೋತಿ ವಹಿಸಿದ್ದರು.

ಈ ಸಂದರ್ಭದಲ್ಲಿ ಗುರುಬಸಪ್ಪ, ಡಾ. ಹೆಚ್. ಸಿ. ಆಶಿಕಾ, ಡಾ. ಅತಿಯಾ ಕೌಸರ್, ಧಾರವಾಡ ಕಲ್ಪನಾ ಸಿ. ಪದ್ಮ, ಶಾರದಮ್ಮ ಡಿ. ಜ್ಯೋತಿ, ಎಂ.ಸಿ. ಸುಜಾತ ಗುತ್ತೂರು, ರೇಣುಕಾಂಬ, ಉಮಾದೇವಿ, ಎಸ್. ಸುನೀತಾ, ಸವಿತಾ, ಕೆ. ಪುಷ್ಪಾವತಿ, ರೇಣುಕಮ್ಮ, ಸಾಕಮ್ಮ, ಗಾಯತ್ರಿ, ಗುಲಾಬ್ ಜಾನ್, ರತ್ನವ್ವ ಸಾಲಿಮಠ, ಸುರೇಖಾ, ಜ್ಯೋತಿಲಕ್ಷ್ಮಿ, ಹೆಚ್. ಶಾಂತ, ಶೋಭಾ, ರೂಪ, ಶೈಲಜಾ, ಸವಿತಾ ಇನ್ನಿತರರಿದ್ದರು. ಸಂಧ್ಯಾ ನಿರೂಪಿಸಿದರು. ಹೆಚ್. ಶಾಂತ ಸ್ವಾಗತಿಸಿದರು. ಪ್ರಾರ್ಥನೆ ಚಂದನ ಮತ್ತು ಐಶ್ವರ್ಯ ಪ್ರಾರ್ಥಿಸಿದರು. ಕೆ.ಸಿ. ಗಿರಿಜಾಂಬ, ಮಮತಾ, ಚಂದ್ರಕಲಾ ನಾಗರತ್ನ ನಾಡಗೀತೆ ಹಾಡಿದರು.

## ಬಲ್ಲೂರಿನಲ್ಲಿ ಇಂದು ವೀರಭದ್ರಸ್ವಾಮಿ ರಥೋತ್ಸವ



ದಾವಣಗೆರೆ ತಾಲ್ಲೂಕು ಬಲ್ಲೂರು ಗ್ರಾಮದಲ್ಲಿ ಇಂದು ಬೆಳಗಿನ ಜಾವ 5.30 ಕ್ಕೆ ಸ್ವಾಮಿಯ ಗುಗ್ಗಳ, ಬೆಳಿಗ್ಗೆ 10 ಗಂಟೆಗೆ ಸ್ವಾಮಿಯ ಕೆಂಡದಾರ್ಚನೆ ನಡೆಯುವುದು. ಕಾರ್ಯಕ್ರಮದಲ್ಲಿ ಬೆಳಿಗ್ಗೆ 11.30 ಕ್ಕೆ ಸಾಮೂಹಿಕ ವಿವಾಹ ನೆರವೇರುವವು.

ನಂತರ 11.45 ಕ್ಕೆ ಸ್ವಾಮಿಯ ರಥೋತ್ಸವ ಜರುಗುವುದು. ಸಂಜೆ 7 ಗಂಟೆಗೆ ಸ್ವಾಮಿಯ ಓಕುಳಿ ನಡೆಯಲಿದೆ. ರಥೋತ್ಸವದ ಅಂಗವಾಗಿ ಪ್ರಸಾದ ಏರ್ಪಡಿಸಿದೆ.

## ಹಡಗಲಿ: ಅಂಗನವಾಡಿ ಕಾರ್ಯಕರ್ತೆಯರಿಂದ ಪ್ರತಿಭಟನೆ



ಹೂವಿನಹಡಗಲಿ, ಮಾ.16- ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ತಾಲ್ಲೂಕು ಸಮಿತಿ ವತಿಯಿಂದ ತಹಶೀಲ್ದಾರ್ ಕಚೇರಿ ಎದುರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

## ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ



ದಾವಣಗೆರೆ, ಮಾ. 16- ರೋಟರಿ ಕ್ಲಬ್ ಹಾಗೂ ಸ್ಟಡಿ ಐಕ್ಯೂ ಅಕಾಡೆಮಿ ವತಿಯಿಂದ ವಿದ್ಯಾನಗರ ರೋಟರಿ ಬಾಲಭವನದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ರೋಟರಿ ಕ್ಲಬ್ ಅಧ್ಯಕ್ಷ ಎನ್.ಬಿ. ಮೃತ್ಯುಂಜಯಪ್ಪ, ಚಂದ್ರಪ್ಪ, ಎಂ.ಬಿ. ಪರಶುರಾಮಪ್ಪ, ಸ್ಟಡಿ ಐಕ್ಯೂ ಅಕಾಡೆಮಿಯ ಅವಿನಾಶ್ ನಾಯ್ಕ, ಉಪಾಧ್ಯಕ್ಷ ಕೆ.ಬಿ. ರಾಕೇಶ್, ಕಾರ್ಯದರ್ಶಿ ಆರ್. ಸೈಯದ್ ಅರೀಫ್ ಮತ್ತಿತರರು ಉಪಸ್ಥಿತರಿದ್ದರು.

# ದೈಹಿಕ ಆರೋಗ್ಯ ಕಾಪಾಡಲು ಕ್ರೀಡೆ ಸಹಕಾರಿ



### ಎಸ್ಪಿ ಹನುಮಂತರಾಯ

ದಾವಣಗೆರೆ, ಮಾ.16- ದೈಹಿಕ ಆರೋಗ್ಯ ಕಾಪಾಡುವಲ್ಲಿ ಕ್ರೀಡೆಗಳು ಸಹಕಾರಿಯಾಗಿವೆ. ಕ್ರೀಡೆ ಜೀವನದ ಒಂದು ಭಾಗವಾಗಿ ರೂಪುಗೊಳ್ಳಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸ.ಪ್ರ.ದ. ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ ಹಾಗೂ ದಾವಣಗೆರೆ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರ ಕಾಲೇಜು ದಾವಣಗೆರೆ ವಲಯ ಹಾಗೂ ಅಂತರ ವಲಯದ ಬಾಲ್ ಬ್ಯಾಡ್ಮಿಂಟನ್ ಪುರುಷರ ಮತ್ತು ಮಹಿಳೆಯರ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ಕ್ರೀಡೆ ಒಂದು ಹವ್ಯಾಸವಾಗಬೇಕು. ದಿನನಿತ್ಯ 5 ಕಿ.ಮೀ. ಓಟವನ್ನು ರೂಢಿಸಿಕೊಂಡರೆ ದೀರ್ಘ ಕಾಲದವರೆಗೆ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಡಬಹುದು ಎಂದರು. ನಿತ್ಯ ದೈಹಿಕ ವ್ಯಾಯಾಮ ಮಾಡಿದಲ್ಲಿ ದೇಹ ಮತ್ತು ಮನಸ್ಸು ಕ್ರಿಯಾಶೀಲವಾಗಿರುತ್ತದೆ ಹಾಗೂ ಖಿನ್ನತೆ ದೂರವಾಗುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ತೂ.ಕ. ಶಂಕರಯ್ಯ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಬಿಐ ಶಾಖಾ ವ್ಯವಸ್ಥಾಪಕ ದಿನೇಶ್‌ಚಂದ್ರ ತ್ರಿಪಾಠಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ವೀರೇಂದ್ರ, ಪ್ರೊ. ಸುನೀತ, ಪ್ರೊ. ಭೀಮಣ್ಣ ಸುಣಗಾರ, ಪ್ರೊ. ಸದಾಶಿವ, ಮಹ್ಮದ್ ಖಾನ್, ಪ್ರೊ. ಶಂಕರ್ ಶೀಲಿ, ಡಾ. ತಿಪ್ಪಾರೆಡ್ಡಿ, ಡಾ. ಪ್ರಕಾಶ್ ಹಲಗೇರಿ, ಪ್ರೊ. ಗೌರಮ್ಮ, ದಾದಾಪೀರ್ ನವಿಲೇಹಾಳ್, ಡಾ. ಮಹೇಶ್ ಪಾಟೀಲ್, ಶಶಿಕಲಾ ಸೇರಿದಂತೆ ಇತರರಿದ್ದರು.

# ಮೊಬೈಲ್ ಸಂಸ್ಕೃತಿಗೆ ಯುವ ಜನತೆ ಮಾರು



### ಮೇಯರ್ ವೀರೇಶ್

ದಾವಣಗೆರೆ, ಮಾ.16- ಇಂದಿನ ಯುವಜನತೆ ಮೊಬೈಲ್ ಸಂಸ್ಕೃತಿಗೆ ಮಾರುಹೋಗಿ ತನ್ನ ಜವಾಬ್ದಾರಿ ಮತ್ತು ಸಮಯ ಪ್ರಜ್ಞೆಯಿಂದ ದೂರ ಉಳಿಯುತ್ತಿದ್ದಾರೆ ಎಂದು ಮಹಾಪೌರ ಎಸ್.ಟಿ. ವೀರೇಶ್ ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ ಹಾಗೂ ದಾವಣಗೆರೆ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಅಂತರ ಕಾಲೇಜು ದಾವಣಗೆರೆ ವಲಯ ಮತ್ತು ಅಂತರ ವಲಯದ ಬಾಲ್ ಬ್ಯಾಡ್ಮಿಂಟನ್ ಪುರುಷರ ಹಾಗೂ ಮಹಿಳೆಯರ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ಒಂದಿಲ್ಲೊಂದು ಕ್ರೀಡೆಯಲ್ಲಿ ತೊಡಗಿಸಿಕೊಂಡಾಗ ಮಾನಸಿಕ ಮತ್ತು ದೈಹಿಕ ಆರೋಗ್ಯ ಸುಧಾರಣೆಯಾಗುತ್ತದೆ ಎಂದರು.

ಮಾನಸಿಕ ನೆಮ್ಮದಿಗೆ ಕ್ರೀಡೆ ಅತ್ಯಂತ ಸಹಕಾರಿಯಾಗಿದ್ದು, ನಮಗೆ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕು. ಗುರಿ ಸಾಧನೆಗೆ ದೃಢ ಸಂಕಲ್ಪ ಮಾಡಬೇಕೆಂದರು.

ಪ್ರಾಂಶುಪಾಲ ಟಿ. ವೀರೇಶ್ ವಹಿಸಿದ್ದರು. ಉಪನ್ಯಾಸಕರಾದ ಭೀಮಣ್ಣ ಸುಣಗಾರ್, ವೀರೇಂದ್ರ, ಮಹೇಶ್ ಪಾಟೀಲ್, ಸದಾಶಿವ, ಡಾ. ವೆಂಕಟೇಶ್, ತಿಪ್ಪೇಸ್ವಾಮಿ, ಬಸವರಾಜ್ ದಮ್ಮಳ್ಳಿ, ರಂಗಸ್ವಾಮಿ ಉಪಸ್ಥಿತರಿದ್ದರು.

ಶಾಂತಮ್ಮ ಪ್ರಾರ್ಥಿಸಿದರು. ಭೀಮಣ್ಣ ಸುಣಗಾರ್ ನಿರೂಪಿಸಿದರು. ವೀರೇಂದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ರಂಗಸ್ವಾಮಿ ಸ್ವಾಗತಿಸಿದರು. ಮಹೇಶ್ ಪಾಟೀಲ್ ವಂದಿಸಿದರು.

## ಬೇಕಾಗಿದ್ದಾರೆ

**ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.**

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.**

## ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಶ್ರೀ ಸುನೀಲ್ ಎನ್. ಜೈನ್ ಬಿನ್ ನತ್ಮಲ್ ಜೈನ್, ಡೋರ್ ನಂ. 720/1-2, ತ್ರಿಶೂಲ್ ಟಾಕೀಸ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ ಸಿಟಿ ವಾಸಿಯಾದ ನಾನು ಸಾರ್ವಜನಿಕರೆಲ್ಲರಿಗೂ ತಿಳಿಸಬಯಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸೊತ್ತನ್ನು ಅದರ ಹಕ್ಕುದಾರಿ ಸ್ವಾಧೀನಾನುಭವಿಗಳು ಮತ್ತು ಖಾತಾದಾರಿ ಮಾಲೀಕರಾದ ಶ್ರೀ ಶಿಕ್ಲಗಾರ ಮಹಮ್ಮದ್ ಯಾಸೀನ್, ಹಾವೇರಿ ಜಿಲ್ಲಾ, ರಾಣೇಬೆನ್ನೂರು ತಾಲ್ಲೂಕು ಮೇಡ್ಲೇರಿ ಗ್ರಾಮದ ವಾಸಿ ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸುತ್ತಿದ್ದು, ಷೆಡ್ಯೂಲ್ ಸೊತ್ತಿನ ಮೇಲೆ ಯಾವುದೇ ವ್ಯಕ್ತಿ, ಸಂಸ್ಥೆ, ಇತ್ಯಾದಿಯವರ್‍ಯಾರೇ ಆಗಲಿ ಯಾವುದೇ ತರಹದಲ್ಲಿ ಕಾನೂನಿನಡಿಯಲ್ಲಿ, ಯಾವುದೇ ತರಹದ ಹಕ್ಕು, ಆಸಕ್ತಿ ವಗೈರೆ ಇದ್ದಲ್ಲಿ, ಅಂತಹವರು ಈ ತಾರೀಖಿನಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಾನೂನು ರೀತ್ಯಾ ತಮ್ಮ ಅಂತಹ ಹಕ್ಕು, ಆಸಕ್ತಿ ಇತ್ಯಾದಿಗಳನ್ನು ಸ್ಥಾಪಿಸುವಂತಹ ಅಥವಾ ಸಾಬೀತುಗೊಳಿಸತಕ್ಕಂತಹ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ತಿಳಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸೊತ್ತಿನ ಮೇಲೆ ಕಾನೂನು ರೀತ್ಯಾ ಯಾರದ್ದೂ, ಎಂದಿಗೂ, ಯಾವುದೇ ತರಹದ ಹಕ್ಕು, ಆಸಕ್ತಿ, ವಗೈರೆ ಇಲ್ಲವೆಂದು ಪರಿಗಣಿಸಿ, ಸದರಿ ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಖರೀದಿಸುವ ಬಗ್ಗೆ ಶುದ್ಧ ಕ್ರಯಪತ್ರವನ್ನು ಮಾಡಿಸಿಕೊಳ್ಳುತ್ತೇನೆ. ಹಾಗೂ ಆ ನಂತರದಲ್ಲಿ ಷೆಡ್ಯೂಲ್ ಸೊತ್ತಿನ ಹಕ್ಕು, ಸ್ವಾಧೀನಾನುಭವ ಇತ್ಯಾದಿಗಳ ಬಗ್ಗೆ ಯಾವುದೇ ತಂಟೆ-ತಕರಾರು ಮಾಡಲು, ಯಾವುದೇ ತರಹದ ಹಕ್ಕು ಸ್ಥಾಪಿಸಲು ಅಂತಹ ಯಾವುದೇ ವ್ಯಕ್ತಿ, ಸಂಸ್ಥೆ ಇತ್ಯಾದಿಯವರು ಯಾವುದೇ ತರಹದ ಹಕ್ಕನ್ನು ಪಡೆಯಲಾರರು ಮತ್ತು ತಮ್ಮ ಹಕ್ಕು ಕಳೆದುಕೊಂಡಿರುತ್ತಾರೆಂದು ಮತ್ತು ಸದರಿ ನನ್ನನ್ನು ಕಾನೂನು ರೀತ್ಯಾ ಯಾವುದೇ ರೀತಿಯಲ್ಲಿ ಜವಾಬ್ದಾರರನ್ನಾಗಲೀ, ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ರೀತಿ ತಿಳಿಸುವ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇನೆ, ಎಲ್ಲರೂ ತಿಳಿಯಿರಿ.

**ಷೆಡ್ಯೂಲ್ :** ಹರಪನಹಳ್ಳಿ ತಾಲ್ಲೂಕು, ತೆಲಿಗಿ ಹೊಬಳಿ, ಕುಂಚೂರು ಗ್ರಾಮದ ರೀ. ಸರ್ವೆ ನಂಬರ್ 149/ಬಿ ಇದರ ವಿಸ್ತೀರ್ಣ ಎಕರೆ 1 ಸೆಂಟ್ಸ್ 20 ತರಹೆ 0-05 ಪೈಸೆ ಉಳ್ಳ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಆಲಗೇರಿ ನಿಂಗಪ್ಪನವರ ಜಮೀನು, ಪಶ್ಚಿಮಕ್ಕೆ : ಕೆರೆ ಅಂಗಳ, ಉತ್ತರಕ್ಕೆ : ಮಡಿವಾಳರ ಬಸಪ್ಪನವರ ಜಮೀನು, ದಕ್ಷಿಣಕ್ಕೆ : ಕೆರೆ ಅಂಗಳ. ಈ ಮಧ್ಯದ ಜಮೀನು ಒಂದು. ಮತ್ತು ಹರಪನಹಳ್ಳಿ ತಾಲ್ಲೂಕು, ತೆಲಿಗೆ ಹೋಬಳಿ, ಕುಂಚೂರು ಗ್ರಾಮದ ರೀ. ಸರ್ವೆ ನಂಬರ್ 148 ಇದರ ವಿಸ್ತೀರ್ಣ ಎಕರೆ 8 ಸೆಂಟ್ಸ್ 25 ತರಂ 3-72 ಪೈಸೆ ಉಳ್ಳ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಅಲಗೇರಿ ನಿಂಗಪ್ಪನವರ ಜಮೀನು, ಪಶ್ಚಿಮಕ್ಕೆ : ಕೆರೆ ಅಂಗಳ, ಉತ್ತರಕ್ಕೆ : ಮಡಿವಾಳರ ಬಸಪ್ಪನವರ ಜಮೀನು, ದಕ್ಷಿಣಕ್ಕೆ : ಕೆರೆ ಅಂಗಳ. ಈ ಮಧ್ಯದ ಜಮೀನು ಒಂದು.

**ದಿನಾಂಕ : 15-03-2021** **ಸಹಿ/- (ಸುನೀಲ್ ಎನ್. ಜೈನ್)#720/1-2, ತ್ರಿಶೂಲ್ ಟಾಕೀಸ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ ಸಿಟಿ (ಮೊಬೈಲ್ ನಂ. 9844133016)**

# ಆರ್ಥಿಕವಾಗಿ ಹಿಂದುಳಿದ ವರ್ಗದ ಪ್ರಮಾಣ ಪತ್ರಕ್ಕೆ ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ಹಕ್ಕೊತ್ತಾಯ

ದಾವಣಗೆರೆ, ಮಾ.1 6- ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ಮಾಡಿ ಯಾವುದೇ ಮೀಸಲಾತಿ ದೊರೆಯದ, ಪಡೆಯದ ಸಾಮಾನ್ಯ ವರ್ಗದ ಆರ್ಥಿಕವಾಗಿ ಹಿಂದುಳಿದವರಿಗಾಗಿ ಶೇ. 10 ರ ಮೀಸಲಾತಿಯನ್ನು ದೇಶಾದ್ಯಂತ ಜಾರಿಗೆ ತಂದಿದೆ. ದುರಾದೃಷ್ಟವಶಾತ್ ರಾಜ್ಯ ಸರ್ಕಾರದ ಆದೇಶದಲ್ಲಿನ ತಾಂತ್ರಿಕ ದೋಷದ ನ್ಯೂನತೆಗಳಿಂದಾಗಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಹಾಗೂ ಸಾರಸ್ವತ ಬ್ರಾಹ್ಮಣ ಸಮಾಜ ದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ, ಆರ್ಥಿಕವಾಗಿ ಹಿಂದುಳಿದ ವರ್ಗದ ಪ್ರಮಾಣ ಪತ್ರವನ್ನು ನೀಡಲಾಗುತ್ತಿಲ್ಲ. ಈ ರೀತಿಯ ಅನ್ಯಾಯ ಇನ್ನೂ ಕೆಲವು ಸಾಮಾನ್ಯ ವರ್ಗದ ಸಮುದಾಯದವರಿಗೂ ಆಗುತ್ತಿದೆ. ತಕ್ಷಣವೇ ಸರ್ಕಾರ ಈ ತಾಂತ್ರಿಕ ನ್ಯೂನತೆಗಳನ್ನು ಸರಿಪಡಿಸಿ, ನ್ಯಾಯ ಒದಗಿಸಲು ಗೌಡ ಸಾರಸ್ವತ ಸಮಾಜದ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಅವರು, ಜಿ.ಎಸ್.ಬಿ. ಸಮಾಜದ ಸರ್ವ ಸಮುದಾಯದ ಪರವಾಗಿ ಹಕ್ಕೊತ್ತಾಯ ಮಾಡಿದ್ದಾರೆ.


## ನಾಳೆ 'ಜನಸ್ಪಂದನ'

ದಾವಣಗೆರೆ ಮಾ.16- ನಾಡಿದ್ದು ದಿನಾಂಕ 18 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜನಸ್ಪಂದನ ಸಭೆ ಏರ್ಪಡಿಸಲಾಗಿದ್ದು, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಾಗುವುದು.

ಸಾರ್ವಜನಿಕರು ತಮ್ಮ ಅಹವಾಲುಗಳೊಂದಿಗೆ ಸಭೆಗೆ ಹಾಜರಾಗಿ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ತಿಳಿಸಿದ್ದಾರೆ.

## ಬಿಐಇಟಿಯ ವಿದ್ಯಾರ್ಥಿಗಳು ಆಯ್ಕೆ

ದಾವಣಗೆರೆ, ಮಾ. 16- ಕೆಪಿಎಂಜಿ ಪ್ರೈ. ಲಿಮಿಟೆಡ್, ಬೆಂಗಳೂರು ವತಿಯಿಂದ ನಗರದ ಬಿಐಇಟಿಯ ವಿದ್ಯಾರ್ಥಿಗಳಿಗೆ ಆನ್‌ಲೈನ್ ಡ್ರೈವ್ ನಡೆಸಿತು. ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ, ಕಂಪ್ಯೂಟರ್ ವಿಜ್ಞಾನ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳಿಗೆ ಈ ಡ್ರೈವ್ ನಡೆದಿದ್ದು, 15 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.



## ವಾದ್ಯ ಕಲಾವಿದರಿಗೆ ಸರ್ಕಾರಿ ಸೌಲಭ್ಯ ಕಲ್ಪಿಸಲು ಆಗ್ರಹ

ದಾವಣಗೆರೆ, ಮಾ. 16 - ವಾದ್ಯ ಕಲಾವಿದರಿಗೆ ಕಟ್ಟಡ ಕಾರ್ಮಿಕರಿಗೆ ನೀಡುವ ಸೌಲಭ್ಯ ಕಲ್ಪಿಸಬೇಕು, ಕಲಾವಿದರಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು, ಮಾಸಾಶನ ನೀಡಬೇಕು ಎಂದು ದಾವಣಗೆರೆ ಜಿಲ್ಲಾ ಮಂಗಳ ವಾದ್ಯ ಕಲಾವಿದರ ಸಂಘ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ದಾವಣಗೆರೆ ಜಿಲ್ಲಾ ಮಂಗಳ ವಾದ್ಯ ಕಲಾವಿದರ ಸಂಘದ ಅಧ್ಯಕ್ಷ ಎಂ. ಹಾಲೇಶ್ ಬಸವನಾಳ್, ಜಿಲ್ಲೆಯಲ್ಲಿ 1,500 ಜನ ಈ ವೃತ್ತಿಯಲ್ಲಿದ್ದಾರೆ. ವರ್ಷದಲ್ಲಿ 2-3 ತಿಂಗಳು ಮಾತ್ರ ವಾದ್ಯಗಾರರಿಗೆ ಕೆಲಸ ಇರುತ್ತದೆ. ಹೀಗಾಗಿ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದೇವೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಮಾತನಾಡಿ, ಸರ್ಕಾರದ ಬಳಿ ನೆರವು ಕೇಳಿದರೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ಬಳಿ ಕೈ ತೋರಿಸುತ್ತಿದೆ. ಆದರೆ, ಪಾರಂಪರಿಕವಾಗಿ ಈ ವೃತ್ತಿಯಲ್ಲಿ ತೊಡಗಿರುವ ನಮಗೆ ಇಲಾಖೆ ಕೇಳುವ ದಾಖಲೆಗಳನ್ನು ಒದಗಿಸಲು ಸಾಧ್ಯವಾಗದು ಎಂದರು.

ಆಂಧ್ರ ಪ್ರದೇಶ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ಮಂಗಳ ವಾದ್ಯಗಾರರನ್ನು ನೇಮಿಸಲಾಗಿದೆ. ಅದೇ ರೀತಿ ಕ್ರಮವನ್ನು ರಾಜ್ಯದಲ್ಲೂ ತೆಗೆದುಕೊಳ್ಳಬೇಕು ಎಂದವರು ಆಗ್ರಹಿಸಿದರು.

ಸಂಘದ ಪದಾಧಿಕಾರಿಗಳಾದ ಬಳ್ಳಾರಿ ಕೆ.ಇ. ರುದ್ರೇಶ್, ಶಾಮನೂರು ನಾಗರಾಜ್, ಎಸ್. ರಾಜು, ಜಿ. ಗಣೇಶ್, ಟಿ.ಎಸ್. ವರಪ್ರಸಾದ್, ಹೊಸಹಳ್ಳಿ ಹನುಮಂತಪ್ಪ, ಹದಡಿ ಚಂದ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಆಶ್ರಯಕ್ಕೆ ವಶಪಡಿಸಿಕೊಂಡ ಜಮೀನಿನ ಪರಿಹಾರಕ್ಕೆ ಪ್ರತಿಭಟನೆ

ದಾವಣಗೆರೆ, ಮಾ. 16 - ಆಶ್ರಯ ಮನೆ ನಿರ್ಮಿಸಲು ಪಾಲಿಕೆ ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಮುಖ್ಯಮಂತ್ರಿ ನಿವಾಸದ ಎದುರು ಪ್ರತಿಭಟನೆ ನಡೆಸುವುದಾಗಿ ಸ್ವಚ್ಛತಾ ಯೋಗಿ ಸಫಾಯಿ ಕರ್ಮಚಾರಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್. ಹುಲುಗೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು ವಿನೋಬನಗರದ ಬಿ.ಎಂ. ಬಸವರಾಜಪ್ಪ ಹಾಗೂ ಸಾವಿತ್ರಮ್ಮ ಎಂಬುವವರಿಗೆ ಸೇರಿದ ಎಸ್.ಪಿ.ಎಸ್. ನಗರದ 2ನೇ ಹಂತದಲ್ಲಿರುವ ಸರ್ವೆ ನಂಬರ್ 145/4ಕ್ಕೆ ಸೇರಿದ 2 ಎಕರೆ 24 ಗುಂಟೆಯನ್ನು ಅನಧಿಕೃತವಾಗಿ ವಶಕ್ಕೆ ಪಡೆದುಕೊಂಡು ಆಶ್ರಯ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಆರೋಪಿಸಿದರು.

ಕಳೆದ 6-7 ವರ್ಷಗಳಿಂದ ಮನವಿ ಮಾಡಿಕೊಳ್ಳುತ್ತಾ ಬಂದಿದ್ದರೂ ಪರಿಹಾರ ನೀಡಿಲ್ಲ. ಹೀಗಾಗಿ ಇನ್ನು 15 -20 ದಿನಗಳಲ್ಲಿ ಪರಿಹಾರ ನೀಡದಿದ್ದರೆ ಮುಖ್ಯಮಂತ್ರಿ ಇಲ್ಲವೇ ವಸತಿ ಸಚಿವರ ನಿವಾಸದ ಎದುರು ಜಮೀನು ಕಳೆದುಕೊಂಡವರ ಕುಟುಂಬ ಪ್ರತಿಭಟನೆ ನಡೆಸಲಿದೆ ಎಂದವರು ಹೇಳಿದ್ದಾರೆ.

ಬಿ.ಎಂ. ಬಸವರಾಜಪ್ಪ, ಸಾವಿತ್ರಮ್ಮ, ಡಿ.ಸಿ. ಲಕ್ಷ್ಮಣ, ಎಸ್. ಮಲ್ಲಿಕಾರ್ಜುನ, ಮಂಜುನಾಥ, ನಾಗರಾಜ, ರುದ್ರೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.


## ರಾಜ್ಯ ಮಹಿಳಾ ನಿಲಯದಲ್ಲಿಂದು ವಿವಾಹ

ದಾವಣಗೆರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಮಹಿಳಾ ನಿಲಯದ ನಿವಾಸಿಯ ವಿವಾಹ ಮಹೋತ್ಸವ ಇಂದು ಬೆಳಿಗ್ಗೆ 11 ರಿಂದ 11.45 ಕ್ಕೆ ಸಲ್ಲುವ ಶುಭ ಲಗ್ನದಲ್ಲಿ ಮಾಂಗಲ್ಯಧಾರಣೆ ನಡೆಯಲಿದೆ.

ಮಹಿಳಾ ನಿಲಯದ ನಿವಾಸಿ ಕೆ.ಎಂ. ಸೌಮ್ಯ ಇವರ ವಿವಾಹ ಕುಮುಟಾ ತಾಲ್ಲೂಕು ಕಡೆಕೋಡಿ ಗ್ರಾಮದ ಸುಬ್ರಾಯ ಮಂಜುನಾಥ ಭಟ್ಟ ಅವರೊಂದಿಗೆ ನೆರವೇರಲಿದೆ. ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮಹಿಳಾ ಮತ್ತು ಮಕ್ಕಳ ಇಲಾಖೆ ಉಪನಿರ್ದೇಶಕರು ಹಾಗೂ ಮಹಿಳಾ ನಿಲಯದ ಅಧೀಕ್ಷಕರು ಪಾಲ್ಗೊಳ್ಳಲಿದ್ದಾರೆ.

# ಆಧುನಿಕ ಶಿಕ್ಷಣ ಸಂಶಯ ಹುಟ್ಟು ಹಾಕುತ್ತಿದೆ

### ರಾಣೇಬೆನ್ನೂರಿನಲ್ಲಿ ಶ್ರೀ ಪ್ರಕಾಶಾನಂದಜೀ




ರಾಣೇಬೆನ್ನೂರು, ಮಾ.16- ಇಂದು ಶ್ರದ್ಧೆಗಿಂತ ಸಂಶಯ ಹೆಚ್ಚಾಗಿದೆ. ಆಧುನಿಕ ಶಿಕ್ಷಣ ಸಂಶಯವನ್ನು ಹುಟ್ಟು ಹಾಕುತ್ತಿದೆ ಎಂದು ರಾಮಕೃಷ್ಣಾಶ್ರಮದ ಶ್ರೀ ಪ್ರಕಾಶಾನಂದಜೀ ಮಹಾರಾಜರು ಬೇಸರ ವ್ಯಕ್ತಪಡಿಸಿದರು.

ಸ್ಥಳೀಯ ಬಿಎಜೆಎಸ್ಎಸ್ ಕಾಲೇಜು ಗಾಯತ್ರಿ ಕ್ಯಾಂಪಸ್‌ನಲ್ಲಿ ಕೋಟಿ ಗಾಯತ್ರಿ ಜಪ ಯಜ್ಞದ 15ನೇ ವಾರ್ಷಿಕೋತ್ಸವದ ಧರ್ಮಸಭೆಯಲ್ಲಿ ಸಂದೇಶ ನೀಡಿದರು.

ನಮ್ಮ ಋಷಿ ಮುನಿಗಳು ಕೇವಲ ಗಡ್ಡ ಬಿಟ್ಟು, ಗೆಡ್ಡೆ-ಗೆಣಸು ತಿಂದು ಬದುಕಿದವರಲ್ಲ. ಪ್ರತಿಯೊಂದನ್ನು ಅರಿತು ಆಚರಣೆಗೆ ತಂದವರು. ಜಗತ್ತು ಕಂಡರಿಯದ ಮಹಾನ್ ಜ್ಞಾನಿಗಳು. ಇಂದು ಗಾಯತ್ರಿ ಮಂತ್ರದ ವೈಜ್ಞಾನಿಕ ಸತ್ಯ ತಿಳಿಸುವ ಅವಶ್ಯಕತೆ ಇದೆ ಎಂದು ಮಹಾರಾಜರು ಅಭಿಪ್ರಾಯ ಪಟ್ಟರು.

ಪ್ರತಿ ಮಂತ್ರದಲ್ಲೂ ಅದ್ಭುತ ಶಕ್ತಿ ಇದೆ. ಶ್ರದ್ಧೆಯಿಂದ ಪಾರಾಯಣ ಮಾಡಿದರೆ ಆ ಶಕ್ತಿ ಸಲ್ಲುತ್ತದೆ. ಮಾತುಗಳು ಕೂಡಾ ಮಂತ್ರದಷ್ಟು ಶಕ್ತಿ ಹೊಂದಿವೆ. ಇಂದು ಯಾರಿಗೂ ಪ್ರವಚನ ಕೇಳುವಷ್ಟು ಪುರುಸೊತ್ತು ಇಲ್ಲ. ಎಲ್ಲರಿಗೂ ಪ್ರವಚನಕ್ಕಿಂತ ಆದೇಶದ ಅವಶ್ಯಕತೆ ಇದೆ ಎಂದು ಹಿರೇಮಠದ ಡಾ. ಮರುಳಶಂಕರ ಶಿವಾಚಾರ್ಯ ಸ್ವಾಮಿಗಳು ನುಡಿದರು.

ಜಿ.ಪಂ. ಅಧ್ಯಕ್ಷ ಏಕ ನಾಥ ಭಾನುವಳ್ಳಿ, ದಾವಣಗೆರೆ ಯುಬಿಡಿಟಿ ತಾಂತ್ರಿಕ ಮಹಾ ವಿದ್ಯಾಲಯದ ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ. ಎಸ್.ಎ. ದಿವಾಕರ್, ಸಂಸ್ಥೆಯ ನಿವೃತ್ತ ನೌಕರರಾದ ಆರ್.ಎ. ಮಕಾನ ದಾರ, ಕೃಷ್ಣರೆಡ್ಡಿ, ಪಿಹೆಚ್‌ಡಿ ಪದವಿ ಪಡೆದ ಜ್ಯೋತಿ ಮುದಿಗೌಡ್ರ ಅವರನ್ನು ಗೌರವಿಸಲಾಯಿತು.

ಆಡಳಿತಾಧಿಕಾರಿ ಡಾ. ಆರ್.ಎಂ. ಕುಬೇರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಎಸ್.ಎ. ತಾಂಬೆ ಸ್ವಾಗತಿಸಿದರು. ಕೆ.ಕೆ. ಹಾವಿನಾಳ ವಂದಿಸಿದರು. ಅಧ್ಯಕ್ಷ ರುದ್ರಪ್ಪ ಲಮಾಣಿ, ಎಸ್.ಎಚ್. ಹುಚ್ಚಗೊಂಡರ ಇನ್ನಿತರರಿದ್ದರು.

## ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ಶಿವರಾತ್ರಿ ಆಚರಣೆ





ದಾವಣಗೆರೆ, ಮಾ.16- ಮಹಾ ಶಿವರಾತ್ರಿ ಪ್ರಯುಕ್ತ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸುಗಮ ಸಂಗೀತ ಹಾಗೂ ಭರತನಾಟ್ಯ ಕಾರ್ಯಕ್ರಮಗಳು ಜರುಗಿದವು.


ಮಹಾಪೌರ ಎಸ್.ಟಿ. ವೀರೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 1996 ರಲ್ಲಿ ಆರಂಭವಾದ ಈ ದೇವಸ್ಥಾನ ದೊಡ್ಡ ಪ್ರಮಾಣದಲ್ಲಿ ಬೆಳೆದು ಇಡೀ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಖ್ಯಾತಿ ಗಳಿಸಿದೆ ಎಂದರು.


ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ಅವರು ಅವಿರತವಾಗಿ ಶ್ರಮಿಸಿದ್ದಾರೆ. ಅವರ ಸೇವೆ ಶ್ಲಾಘನೀಯ ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಈಶ್ವರ - ಪಾರ್ವತಿ - ಗಣಪತಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಬೆಳವನೂರು ನಾಗರಾಜಪ್ಪ, ಸದಸ್ಯರಾದ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಅವರು ಮಹಾಪೌರರಾದ ಎಸ್.ಟಿ. ವೀರೇಶ್ ಅವರನ್ನು ಗೌರವಿಸಿದರು.

ನಂತರ ಸುಗಮ ಸಂಗೀತ, ಭಜನೆ ಮತ್ತು ನಮನ ಅಕಾಡೆಮಿ ಸಂಸ್ಥಾಪಕರಾದ ಶ್ರೀಮತಿ ಮಾಧವಿ ಗೋಪಾಲಕೃಷ್ಣ ಮತ್ತು ತಂಡದವರು ನೃತ್ಯ ಜಾಗರಣೆ, ಭರತ ನಾಟ್ಯ ಪ್ರದರ್ಶಿಸಿದರು.

## 70 ನೇ ವಯಸ್ಸಿನಲ್ಲಿ ಮಗನಿಗೆ ಮರುಜನ್ಮ ನೀಡಿದ ಮಹಾತಾಯಿ





ಜಗಳೂರು, ಮಾ.16- ತಾಲ್ಲೂಕಿನ ದಿದ್ದಿಗೆ ಗ್ರಾಮದ ಲೇ. ಟಿ. ಜಂಬಣ್ಣನವರ ಪತ್ನಿ ಶ್ರೀಮತಿ ಕಡಬಗೆರೆ ಬಸಮ್ಮನವರು ತಮ್ಮ ಮಗನಿಗೆ ಕಿಡ್ನಿ ದಾನ ಮಾಡುವ ಮೂಲಕ ಮರುಜನ್ಮ ನೀಡಿದ್ದಾರೆ.

ಬಸಮ್ಮನವರ ಮಗ ಎಸ್.ಬಿ. ಬಸವರಾಜ್ (47 ವರ್ಷ) ಎರಡೂ ಕಿಡ್ನಿ ವೈಫಲ್ಯಗೊಂಡಿದ್ದು, ಅವರನ್ನು ಉಳಿಸಿಕೊಳ್ಳಲು ಪಣ ತೊಟ್ಟು ತಮ್ಮದೇ ಕಿಡ್ನಿಯನ್ನು ಇಳಿವಯಸ್ಸಿನಲ್ಲಿ ನೀಡಿ, ಕರುಳಿನ ಕುಡಿಗೆ ಮತ್ತೊಮ್ಮೆ ಜೀವ ನೀಡಿದ್ದಾರೆ. ಮಣಿಪಾಲದ ಕಸ್ತೂರಿಬಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆದು, ಮಗ ಮತ್ತು ತಾಯಿ ಆರೋಗ್ಯವಾಗಿದ್ದಾರೆ.

## ಮೋದಿ ಪ್ರಧಾನ ಸಲಹೆಗಾರ ಸಿನ್ಹಾ ರಾಜೀನಾಮೆ

ನವದೆಹಲಿ, ಮಾ. 16 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಪ್ರಧಾನ ಸಲಹೆಗಾರ ಪಿ.ಕೆ. ಸಿನ್ಹಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. 2019ರ ಸೆಪ್ಟೆಂಬರ್‌ನಲ್ಲಿ ಅವರನ್ನು ಪ್ರಧಾನ ಸಲಹೆಗಾರರನ್ನಾಗಿ ನೇಮಿಸಲಾಗಿತ್ತು.

2019ಕ್ಕೆ ಮುಂಚೆ ಸ್ವಲ್ಪ ಕಾಲ ಅವರು ಪ್ರಧಾನ ಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಸಂಪುಟ ಕಾರ್ಯದರ್ಶಿಯಾಗಿಯೂ ಅವರು ಕೆಲಸ ಮಾಡಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x40, 30x50, 30x56, 40x60, 50x80, 50x120, ಎಸ್.ಎಸ್ ಹೈಟೆಕ್ ಬಡಾವಣೆ ಪೂರ್ವ, 30x40, 30x50 ಪಶ್ಚಿಮ 30x50 ರಾಘವೇಂದ್ರ ಲೇಔಟ್ (ಎಸ್.ಎಸ್ ಹೈಟೆಕ್ ಬಡಾವಣೆ ಎದುರು) 30x40 ಪೂರ್ವ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ರಶ್ಮಿ ಹಾಸ್ಟೆಲ್ ಸ್ಕೂಲ್ ಸುತ್ತ-ಮುತ್ತ
30x40 North, 30x50 East, 30x38 East, 43x35 East, 30x70 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಮಾರಾಟಕ್ಕೆ (ಸ್ವಂತಕ್ಕೆ ಕಟ್ಟಿದ್ದು)**
30/40 ರ ಮನೆ ದಕ್ಷಿಣಕ್ಕೆ ಸೈಟ್ ದಕ್ಷಿಣಕ್ಕೆ ಬಾಗಿಲು, ವಾಸ್ತು ಇದೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ)

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x56 ಉತ್ತರ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ, ಬಸವೇಶ್ವರ ಬಡಾವಣೆಯಲ್ಲಿ 30x46 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
ದೇವರಾಜ್ ಅರಸು ಬಡಾವಣೆ 2 ಮಳಿಗೆ, 2 ಮನೆ ಮೇಲೆ, ಕೆಳಗೆ 2 ಮನೆ ಎಸ್.ಎಸ್. 'ಎ' ಬ್ಲಾಕ್ ಅಥಣಿ ಕಾಲೇಜು ಹತ್ತಿರ 30x44 ಪೂರ್ವ ದಿಕ್ಕು ಕೆಳಗೆ ಮನೆ ಮೇಲೆ ಡುಪ್ಲೆಕ್ಸ್ ಮನೆ, ಎಸ್.ಎಸ್. ಹೈಟೆಕ್ ಬಡಾವಣೆ 30x50 ಪಶ್ಚಿಮ, ಶಕ್ತಿ ಬಡಾವಣೆ ದಕ್ಷಿಣ ದಿಕ್ಕು ಕೆಳಗೆ ಮೇಲೆ ಮನೆ 30x40
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ಜಿ.ಜೆ. ಕಾಸ್ಮೆಟಿಕ್ ಪ್ಯಾಲೇಸ್
2842/1, ಜಿ.ಜೆ. ಪಾಯಿಂಟ್, 4ನೇ ಮೇನ್, 2ನೇ ಕ್ರಾಸ್, ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
ಮೊ. : 99019 69595

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳ ಮಾರಾಟಕ್ಕಿವೆ**
30x40 south, 30x40 west, 30x40 North, 30x40 East, 40x60 south 40 ಅಡಿ ರೋಡಿಗಿದೆ. 30x50 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**ಬಾತ್‌ರೂಂ ಗ್ರೌಟ್**
ಬಾತ್ ರೂಂನಲ್ಲಿ ಸಾಧಾರಣ ಗ್ರೌಟ್ ಮಾಡಿರುವುದರಿಂದ ಸೀಲಿಂಗ್‌ನಲ್ಲಿ ನೀರು ಲೀಕೇಜ್ ಆಗಿ ರೂಫ್ ದುರ್ಬಲ ಆಗಬಹುದು. ಅದಕ್ಕೆ ಪರ್ಮನೆಂಟಾದ ಗ್ರೌಟ್ ಮಾಡಿಸಿ ಕೊಂಡು ನಿಶ್ಚಿಂತರಾಗಿ, ಈ ಗ್ರೌಟ್ ಟೈಲ್ಸ್‌ಗೆ ಪರ್ಮನೆಂಟಾಗಿ ಫಿಕ್ಸ್ ಆಗಿರುತ್ತದೆ. ರಿಯಾಯಿತಿ ದರ.
81050 40110

**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ 35x50, ಪೂರ್ವ, 40x60 ಪಶ್ಚಿಮ, 30x50 ದಕ್ಷಿಣ, 30x44 ಉತ್ತರ, ವಾಜಪೇಯಿ ಬಡಾವಣೆ 30x50 ದಕ್ಷಿಣ, 30x40 ಉತ್ತರ, 40x60 ದಕ್ಷಿಣ ಪೂರ್ವ ಕಾರ್ನರ್, ಬಸವೇಶ್ವರ ಬಡಾವಣೆ 30x40 ಪೂರ್ವ, 40x60 ದಕ್ಷಿಣ, ಶಾರದಾಂಬ ದೇವಸ್ಥಾನದ ಹತ್ತಿರ 60x120, 40x60 ಪಶ್ಚಿಮ
ಸೈಟುಗಳು ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಸೊಳ್ಳೆ ಮೆಸ್ ಮಾಡುತ್ತೇವೆ**
ನಮ್ಮಲ್ಲಿ ಸೊಳ್ಳೆ ಪರದೆ ಮಂಚಕ್ಕೆ ಬೇಕಾಗುವ ಅಳತೆಯ ಪ್ರಕಾರ ಹೋಲ್ ಸೇಲ್ ದರದಲ್ಲಿ ಸಿಗುತ್ತದೆ.
98452 79197
93808 33743
88614 38237

**ಬೇಕಾಗಿದ್ದಾರೆ**
ಡ್ರೈವರ್ ಬೇಕಾಗಿದ್ದಾರೆ. ವಯಸ್ಸು 40 ವರ್ಷ. ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ಶ್ರೀ ಆಪ್ಟಿಕಲ್ಸ್
# 312, ವಿನಾಯಕ ಕಾಂಪ್ಲೆಕ್ಸ್, ಪೆವಿಲಿಯನ್ ರೋಡ್, ಶಿವಪ್ರಕಾಶ್ ಮೆಮೋರಿಯಲ್ ಆಸ್ಪತ್ರೆ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
98864 04287

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ತೋಟ ಮತ್ತು ಹೊಲಗಳು ಮಾರಾಟಕ್ಕಿವೆ**
ಐಗೂರು ಹತ್ತಿರ ರಾಗಿಮಸಲವಾಡ, ದುಗ್ಗತ್ತಿ, ನಂದಿತಾವರೆಯಲ್ಲಿ ಹೊಲ ಮತ್ತು ತೋಟಗಳು ಮಾರಾಟಕ್ಕಿವೆ.
ತೋಟ, ಜಮೀನುಗಳು ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ
95911 60520 -ಸುರೇಶ್
99457 02495, ಐಗೂರು ವಿಜಯ್ ಕುಮಾರ್

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಮನೆ ಬಾಡಿಗೆಗೆ ಇದೆ**
ಸಕಲ ಸೌಕರ್ಯವುಳ್ಳ ಉತ್ತರಕ್ಕೆ ಬಾಗಿಲಿರುವ ಮೊದಲನೇ ಮಹಡಿಯಲ್ಲಿ ಎರಡು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. #1859/34, "ಭಾವ ಸಂಗಮ" LIC ಕಾಲೋನಿ, 4ನೇ ಮುಖ್ಯರಸ್ತೆ (ನೂತನ ಕಾಲೇಜ್ ಹಿಂಭಾಗ) ದಾವಣಗೆರೆ-4
94487 46875

**ಮನೆ ಲೀಸ್/ಬಾಡಿಗೆಗೆ**
ನಗರದ ಮಧ್ಯಭಾಗದಲ್ಲಿರುವ ಮಂಡಿಪೇಟೆಯ # 699/1, 2 ಬೆಡ್ ರೂಮಿನ ಮನೆ ಬಾಡಿಗೆಗೆ/ಲೀಸಿಗೆ ಇದೆ. ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ.
87626 76076

**ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ**
"ರಶ್ಮಿ" ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆ ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು BA, B.Ed (ಕನ್ನಡ ಮೇಜರ್) ವಿದ್ಯಾರ್ಹತೆಯುಳ್ಳ ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ. ಸೂಚನೆ: ಶಿಕ್ಷಕಿಯರು ನಮ್ಮ ಶಾಲಾ ವಸತಿ ನಿಲಯದಲ್ಲಿ ಇರಬೇಕು. ಸಂಪರ್ಕಿಸಿ
99163 62288

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಬೇಕಾಗಿದ್ದಾರೆ**
ವೆಯ್ಟರ್, ಕ್ಲೀನರ್, ಲೇಡಿ ಕ್ಲೀನರ್, ಕಿಚನ್ ಸೂಪರ್‌ವೈಸರ್, ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ.
ಹೋಟೆಲ್ ಫುಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688

**ಬೇಕಾಗಿದ್ದಾರೆ**
ಶರಭೇಶ್ವರ ಊಟದ ಹೋಟೆಲ್ ನಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಹಾಗೂ ಕ್ಯಾಷಿಯರ್ (ಮಹಿಳೆಯರು) ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು. ಸಂಪರ್ಕಿಸಿ
94489 80070,
78991 90070

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ANM, GNM ಹಾಗೂ ಆಯಾ ಬೇಕಾಗಿದ್ದಾರೆ. ತಮ್ಮ ಬಯೋಡಾಟಾದೊಂದಿಗೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿರಿ
98450 35710
ಡಾ. ಎಂ.ಎಸ್. ಹಿರೇಮಠ್

**WANTED**
Sales executive (Any Degree) For PVC Pipes and fittings department
SAMARTH MARKETING Davanagere.
97384 86520

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**WANTED**
KANNADA & ENGLISH TYPIST,DTP OPERATOR
OPP. NEW COURT,DVG-06.
80733 00626

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಚಿತ್ರ ಮಂದಿರದಲ್ಲಿ ಕೆಲಸ ಮಾಡಲು ಕ್ಯಾಂಟೀನ್ ಸಹಾಯಕರು ಹಾಗೂ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
98861 22787
73539 50027

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
94838 62779

**SITE FOR SALE**
HARIHAR Real estate
Harihar vidya Nagar 40x30 -1200 west facing, near P.B. Road 1300 sq and industry area near 700 sq feet
85537 99368
80955 70649

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬಾಡಿಗೆಗೆ**
15 ರೂಂಗಳು ವಿತ್ ಅಟ್ಯಾಚ್ಡ್ ಬಾತ್‌ರೂಂ ಮತ್ತು ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಮೊದಲ ಆದ್ಯತೆ. ಸರಸ್ವತಿ ಬಡಾವಣೆ, ದಾವಣಗೆರೆ.
81055 42689

**Home Tution**
100% Result
B.Sc B.Ed, M.Sc ಮಾಡಿರುವ ಶಿಕ್ಷಕರು ನಿಮ್ಮ ಮನೆಗೇ ಬಂದು ಪಾಠ ಮಾಡುವರು (Maths, Science & All) 4 ರಿಂದ 10ನೇ ತರಗತಿಯವರೆಗೆ
90192 68891, 89513 97381

**ಬೇಕಾಗಿದ್ದಾರೆ**
ಪಿಯುಸಿ ಮೇಲ್ಪಟ್ಟ ಸದೃಢ ಯುವಕ ಮತ್ತು ಯುವತಿಯರು ಚಿಕಿತ್ಸಾ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ನ್ಯೂರೋಥೆರಪಿ ಕ್ಲಿನಿಕ್
ಮೋದಿ ಕಾಂಪೌಂಡ್ ಹತ್ತಿರ ಮೋದಿ ರೋಡ್, ದಾವಣಗೆರೆ.
9972600713

**15 ದಿನಗಳಲ್ಲಿ ಪರಿಹಾರ**
ಬಿಪಿ, ಷುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಶ್ರೀ ಮಂಜುನಾಥ ಆಟೋಮೊಬೈಲ್ಸ್‌ನಲ್ಲಿ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
99729 74626

**ಬೇಕಾಗಿದ್ದಾರೆ**
cafe ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಸಂಬಳ ರೂ.8000 ದಿಂದ 15,000ವರೆಗೆ + ಪ್ರೋತ್ಸಾಹ ಧನವಿರುತ್ತದೆ. ಸಂಪರ್ಕಿಸಿರಿ
70197-64596

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**SHOPS FOR RENT**
(with Wash Room Facility)
N.R. Road, Davanagere.
94483 69523

**Required**
Marketing Representative at Bangalore
BASED REPUTED PUBLISHING CO.,
Whatsapp : 97422 29919
Mail : svadhapublishers@gmail.com

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 17-03-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869


## ರಾಜ್ಯ - ರಾಷ್ಟ್ರೀಯ ವಾರ್ತೆ

### ಕೊರೊನಾ ತಡೆಗೆ ಜಾಹೀರಾತು ಅಭಿಯಾನ

ಬೆಂಗಳೂರು ಮಾ. 16 – ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ, ಜಾಹೀರಾತು ಅಭಿಯಾನದ ಮೂಲಕ ಜನರಲ್ಲಿ ಅರಿವು ಮೂಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಬಗ್ಗೆ ಮಾತನಾಡಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಸರ್ಕಾರ ಹಲವಾರು ಜಾಹೀರಾತುಗಳ ಮೂಲಕ ಕೊರೊನಾ ಶಿಷ್ಟಾಚಾರಗಳ ಕುರಿತು ಅರಿವು ಮೂಡಿಸಲಿದೆ. ಲಸಿಕೆ ನೀಡುವ ಪ್ರಮಾಣ ಹೆಚ್ಚಿಸಲಾಗುವುದು. ಕೊರೊನಾ ತಡೆ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದೂ ಅವರು ಹೇಳಿದ್ದಾರೆ.

### ಏ.17ರಂದು ಬೆಳಗಾವಿ ಲೋಕಸಭಾ ಕ್ಷೇತ್ರ, ಎರಡು ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ

ನವದೆಹಲಿ, ಮಾ. 16 - ಕರ್ನಾಟಕದ ಬೆಳಗಾವಿ ಲೋಕಸಭೆ ಸೇರಿದಂತೆ ಎರಡು ಲೋಕಸಭಾ ಕ್ಷೇತ್ರಗಳು ಹಾಗೂ 14 ವಿಧಾನಸಭಾ ಕ್ಷೇತ್ರಗಳಿಗೆ ಏಪ್ರಿಲ್ 17ರಂದು ಉಪ ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ.

ಆಂಧ್ರಪ್ರದೇಶದ ತಿರುಪತಿ ಲೋಕಸಭಾ ಕ್ಷೇತ್ರಕ್ಕೂ ಉಪ ಚುನಾವಣೆ ನಡೆಯಲಿದೆ. ಬೆಳಗಾವಿ ಪ್ರತಿನಿಧಿಸುತ್ತಿದ್ದ ಕೇಂದ್ರ ಸಚಿವ ಸುರೇಶ್ ಅಂಗಡಿ ಹಾಗೂ ತಿರುಪತಿ ಪ್ರತಿನಿಧಿಸುತ್ತಿದ್ದ ಬಳ್ಳಿ ದುರ್ಗಾಪ್ರಸಾದ ರಾವ್ ಅವರು ಕಳೆದ ವರ್ಷ ಕೊರೊನಾದಿಂದ ಸಾವನ್ನಪ್ಪಿದ ನಂತರ ಈ ಕ್ಷೇತ್ರಗಳು ತೆರವಾಗಿದ್ದವು.

ಇದೇ ವೇಳೆ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳೂ ಸೇರಿದಂತೆ 11 ರಾಜ್ಯಗಳ 14 ವಿಧಾನಸಭಾ ಕ್ಷೇತ್ರಗಳಿಗೂ ಉಪ ಚುನಾವಣೆ ನಡೆಯಲಿದೆ. ರಾಜಸ್ಥಾನದ ಮೂರು ವಿಧಾನಸಭಾ ಕ್ಷೇತ್ರಗಳು ಮತ್ತು ಗುಜರಾತ್, ಜಾರ್ಖಂಡ್, ಮಧ್ಯ ಪ್ರದೇಶ, ಮಹಾರಾಷ್ಟ್ರ, ಮಿಜೋರಾಮ್, ನಾಗಾಲ್ಯಾಂಡ್, ಒಡಿಶಾ, ತೆಲಂಗಾಣ ಹಾಗೂ ಉತ್ತರಾಖಂಡಗಳ ತಲಾ ಒಂದು ಕ್ಷೇತ್ರದಲ್ಲಿ ಉಪ ಚುನಾವಣೆ ನಡೆಯಲಿದೆ.

ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಪ್ರತಾಪ್ ಗೌಡ ಪಾಟೀಲ್ ರಾಜೀನಾಮೆಯಿಂದ ಈ ಕ್ಷೇತ್ರ ತೆರವಾಗಿತ್ತು. ಕಾಂಗ್ರೆಸ್ ಶಾಸಕ ಬಿ. ನಾರಾಯಣರಾವ್ ನಿಧನದಿಂದಾಗಿ ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದೆ.

ಮೇ 2ರಂದು ಮತಗಳ ಎಣಿಕೆ ನಡೆಯಲಿದೆ. ನಾಲ್ಕು ರಾಜ್ಯ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶಗಳಿಗೆ ಪ್ರಸಕ್ತ ಚುನಾವಣೆ ನಡೆಯುತ್ತಿದ್ದು, ಅವುಗಳ ಮತಎಣಿಕೆ ಸಹ ಇದೇ ದಿನ ನಡೆಯಲಿದೆ.

### ಖಾಸಗೀಕರಣ ಟೀಕಿಸಿದ ರಾಹುಲ್‌ಗೆ ನಿರ್ಮಲಾ ತಿರುಗೇಟು

ನವದೆಹಲಿ, ಮಾ. 16 – ಖಾಸಗೀಕರಣವನ್ನು ಟೀಕಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕಾಂಗ್ರೆಸ್ ನೇತೃತ್ವದ ಯುಪಿಎ ಅವಧಿಯಲ್ಲಿ ಒಂದು ಕುಟುಂಬಕ್ಕಾಗಿ ಭ್ರಷ್ಟಾಚಾರವನ್ನು ರಾಷ್ಟ್ರೀಕರಣಗೊಳಿಸಲಾಗಿತ್ತು ಹಾಗೂ ತೆರಿಗೆದಾರರ ಹಣವನ್ನು ಖಾಸಗೀಕರಣಗೊಳಿಸಲಾಗಿತ್ತು ಎಂದು ಆರೋಪಿಸಿದ್ದಾರೆ.

ಸರ್ಕಾರದ ಖಾಸಗೀಕರಣ ಕ್ರಮವನ್ನು ಟೀಕಿಸಿದ್ದ ರಾಹುಲ್ ಗಾಂಧಿ, ನರೇಂದ್ರ ಮೋದಿ ಸರ್ಕಾರ ಲಾಭವನ್ನು ಖಾಸಗೀಕರಣ ಮಾಡುತ್ತಿದೆ ಹಾಗೂ ನಷ್ಟವನ್ನು ರಾಷ್ಟ್ರೀಕರಣಗೊಳಿಸುತ್ತಿದೆ. ಮೋದಿಯ ಕ್ಷುದ್ರರಿಗೆ ಸರ್ಕಾರಿ ಬ್ಯಾಂಕುಗಳನ್ನು ಮಾರಲಾಗುತ್ತಿದೆ ಎಂದು ಆರೋಪಿಸಿದ್ದರು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿರುವ ಸೀತಾರಾಮನ್, ರಾಹುಲ್ ಗಾಂಧಿ ಅವರು ತಮ್ಮ ಟಿಪ್ಪಣಿಗಳನ್ನು ಕಟ್ಟಾ ಕಮ್ಯುನಿಸ್ಟರಿಗೆ ಹೊರ ಗುತ್ತಿಗೆ ನೀಡಿದಂತಿದೆ ಎಂದಿದ್ದಾರೆ. ಆಗಾಗ ಇಂತಹ ಎರಡು ಸಾಲು ಮಾತನಾಡುವ ಬದಲು ಅವರ ಜೊತೆ ಗಂಭೀರ ಚರ್ಚೆಗೆ ನಾನು ಬಯಸಿದ್ದೇನೆ ಎಂದೂ ಸೀತಾರಾಮನ್ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಅವರ ಅಜ್ಜಿ ಇಂದಿರಾ ಗಾಂಧಿ ಅವರು ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿರಬಹುದು. ಯುಪಿಎ ಸರ್ಕಾರದ ಅವಧಿಯಲ್ಲಿ ಬ್ಯಾಂಕುಗಳ ನಷ್ಟವನ್ನು ರಾಷ್ಟ್ರೀಕರಣಗೊಳಿಸಲಾಗಿತ್ತು. ಭ್ರಷ್ಟಾಚಾರವನ್ನೂ ರಾಷ್ಟ್ರೀಕರಣಗೊಳಿಸಲಾಗಿತ್ತು ಎಂದವರು ಆರೋಪಿಸಿದ್ದಾರೆ.

### ಮರಾಠಿಗರು ಹೆಚ್ಚಾಗಿರುವ ಪ್ರದೇಶ ಕೇಂದ್ರಾಡಳಿತ ಮಾಡುವುದಿಲ್ಲ : ಕೇಂದ್ರ

ನವದೆಹಲಿ, ಮಾ. 16 – ಮಹಾರಾಷ್ಟ್ರ ಹಾಗೂ ಕರ್ನಾಟಕದ ಗಡಿಗಳಲ್ಲಿ ಮರಾಠಿಗರು ಹೆಚ್ಚಾಗಿರುವ ಭಾಗಗಳನ್ನು ಕೇಂದ್ರಾಡಳಿತ ಪ್ರದೇಶ ಮಾಡುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಗಡಿ ಪ್ರದೇಶವನ್ನು ಕೇಂದ್ರಾಡಳಿತ ಮಾಡಬೇಕೆಂದು ಆಗಾಗ ಹಲವಾರು ವ್ಯಕ್ತಿಗಳು ಹಾಗೂ ಸಂಘಟನೆಗಳು ಮನವಿ ಸಲ್ಲಿಸುತ್ತಿವೆ. ಆದರೆ, ಆ ರೀತಿಯ ಯಾವುದೇ ಪ್ರಸ್ತಾವನೆ ಪರಿಶೀಲನೆಯಲ್ಲಿ ಇಲ್ಲ ಎಂದು ಕೇಂದ್ರ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದರಾಯ್ ತಿಳಿಸಿದ್ದಾರೆ. ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕೆಂದು ಶಿವಸೇನೆ ಇತ್ತೀಚೆಗೆ ಒತ್ತಾಯಿಸಿತ್ತು.

### ಸೆರಮ್‌ನಿಂದ 10 ಕೋಟಿ ಲಸಿಕೆ ಖರೀದಿ

ನವದೆಹಲಿ, ಮಾ. 16 – ಆಕ್ಸ್‌ಫರ್ಡ್ - ಅಸ್ಟ್ರಾಜೆನೆಕಾದ 10 ಕೋಟಿ ಲಸಿಕೆಗಳನ್ನು ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಪಡೆಯಲು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಪ್ರತಿ ಲಸಿಕೆಯನ್ನು ಜಿ.ಎಸ್.ಟಿ. 157.50 ರೂ.ಗಳಂತೆ ಖರೀದಿಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕೇಂದ್ರ ಆರೋಗ್ಯ ಸಚಿವಾಲಯದ ಪರವಾಗಿ ಸರ್ಕಾರಿ ಸಂಸ್ಥೆಯಾದ ಹೆಚ್.ಎಲ್.ಎಲ್. ಲೈಫ್‌ಕೇರ್ ಲಿಮಿಟೆಡ್ ಲಸಿಕೆ ಖರೀದಿಗೆ ಆದೇಶ ಹೊರಡಿಸಿದೆ. ಹತ್ತು ಕೋಟಿ ಲಸಿಕೆಗಳ ವೆಚ್ಚವನ್ನು ಆರೋಗ್ಯ ಸಚಿವಾಲಯ ಭರಿಸಲಿದೆ. ಈ ನಡುವೆ, ರಾಜ್ಯಸಭೆಯಲ್ಲಿ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್, ಭಾರತದ ಅಗತ್ಯಗಳನ್ನು ಬದಿಗೊತ್ತಿ ವಿದೇಶಗಳಿಗೆ ಲಸಿಕೆ ಪೂರೈಸಿಲ್ಲ ಎಂದಿದ್ದಾರೆ.

ವಿದೇಶಗಳಿಗೆ ಇದುವರೆಗೂ 5.94 ಕೋಟಿ ಲಸಿಕೆಗಳನ್ನು ರವಾನಿಸಲಾಗಿದೆ. ವಿಶ್ವವನ್ನೇ ನಮ್ಮ ಕುಟುಂಬ ಎಂದು ಸರ್ಕಾರ ಭಾವಿಸಿದ್ದು, ಈ ಲಸಿಕೆ ಪೂರೈಸಿದೆ ಎಂದವರು ಹೇಳಿದ್ದಾರೆ.

### ಚೀನಾ ವೀಸಾಗೆ ಅಲ್ಲಿನ ಲಸಿಕೆ ಕಡ್ಡಾಯ

ನವದೆಹಲಿ, ಮಾ. 16 – ಚೀನಾಗೆ ಭೇಟಿ ನೀಡಲು ಬಯಸುವ ಪ್ರಯಾಣಿಕರು, ಚೀನಾದಲ್ಲಿ ಉತ್ಪಾದಿಸಲಾದ ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿರುವುದಾಗಿ ಚೀನಾದ ರಾಯಭಾರಿ ಕಚೇರಿ ತಿಳಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ರಾಯಭಾರಿ ಕಚೇರಿ, ಚೀನಾಗೆ ಭೇಟಿ ಮಾಡಲು ಬಯಸುವವರು ಹಾಗೂ ಉದ್ಯೋಗಕ್ಕೆ ತೆರಳಲು ಬಯಸುವವರು ಚೀನಾದಲ್ಲಿ ಉತ್ಪಾದಿಸಲಾದ ಲಸಿಕೆ ಪಡೆಯಬೇಕು. ಲಸಿಕೆ ಪಡೆದ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು ಎಂದು ಹೇಳಿದೆ.

### ಡಿ.ಎಫ್.ಐ. ಸ್ಥಾಪನೆಗೆ ಕೇಂದ್ರ ಸಮ್ಮತಿ

ನವದೆಹಲಿ, ಮಾ. 16 – ಮೂಲಭೂತ ಸೌಲಭ್ಯ ವಲಯಕ್ಕಾಗಿ ಅಭಿವೃದ್ಧಿ ಹಣಕಾಸು ಸಂಸ್ಥೆ (ಡಿ.ಎಫ್.ಐ.) ಸ್ಥಾಪಿಸಲು ಕೇಂದ್ರ ಸಂಪುಟ ಅನುಮತಿ ನೀಡಿದೆ. 20 ಸಾವಿರ ಕೋಟಿ ರೂ. ಬಂಡವಾಳದಲ್ಲಿ ಈ ಸಂಸ್ಥೆ ಸ್ಥಾಪಿಸಲು ಸರ್ಕಾರ ಪ್ರಸ್ತಾಪಿಸಿದೆ.

ಈ ಸಂಸ್ಥೆಯ ಸ್ಥಾಪನೆಗೆ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದಾಗಿ ಮೂಲಭೂತ ಸೌಲಭ್ಯ ವಲಯಕ್ಕೆ ದೀರ್ಘಾವಧಿ ನಿಧಿ ಪಡೆಯಲು ನೆರವಾಗಲಿದೆ ಎಂದು ಸಂಪುಟ ಸಭೆಯ ನಂತರ ಮಾತನಾಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

# ಗ್ರಾಹಕರ ಆಯೋಗಕ್ಕೆ ದೂರುಗಳು ಹೆಚ್ಚಲಿ

**8 ಲಕ್ಷ ಜನಸಂಖ್ಯೆಯ ನಗರದಲ್ಲಿ ತಿಂಗಳಿಗೆ 10 ಪ್ರಕರಣಗಳು ಮಾತ್ರ ದಾಖಲಾಗುತ್ತಿವೆ, ಇದು ಕನಿಷ್ಠ 100ಕ್ಕೆ ಹೆಚ್ಚಬೇಕು.**

**- ಮಹಾಂತೇಶ್ ಬೀಳಗಿ, ಡಿಸಿ**

ದಾವಣಗೆರೆ, ಮಾ. 16 - ದಾವಣಗೆರೆ ದೊಡ್ಡ ವ್ಯಾಪಾರ ಕೇಂದ್ರವಾಗಿದ್ದು, ಜಿಲ್ಲೆಯಲ್ಲಿ ಸುಮಾರು 8 ಲಕ್ಷ ಜನಸಂಖ್ಯೆ ಇದೆ. ಇಷ್ಟೊಂದು ಗ್ರಾಹಕರನ್ನು ಹೊಂದಿರುವ ಜಿಲ್ಲೆಯಲ್ಲಿ ಗ್ರಾಹಕರ ಆಯೋಗದಲ್ಲಿ ತಿಂಗಳಿಗೆ 10 ಪ್ರಕರಣಗಳು ಮಾತ್ರ ದಾಖಲಾಗುತ್ತಿವೆ ಎಂದು ಹೇಳಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪ್ರತಿ ತಿಂಗಳು ಕನಿಷ್ಠ 100 ದೂರುಗಳನ್ನು ಗ್ರಾಹಕರ ಆಯೋಗಕ್ಕೆ ದಾಖಲಿಸಬೇಕು ಎಂದು ಆಶಿಸಿದ್ದಾರೆ.

ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ ಮಂಗಳವಾರ ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಗ್ರಾಹಕರ ಆಯೋಗದಲ್ಲಿ ಕಡಿಮೆ ದೂರು ದಾಖಲಾಗುತ್ತಿವೆ. ಹಾಗಾದರೆ ಎಲ್ಲ ವ್ಯಾಪಾರ, ವಹಿವಾಟುಗಳು ಕಾನೂನಿನ್ವಯ ಆಗುತ್ತಿವೆಯೇ? ಅಥವಾ ಕಾನೂನಿನ ಅರಿವಿನ ಕೊರತೆಯಿಂದ ಗ್ರಾಹಕರು ಗ್ರಾಹಕ ಆಯೋಗಕ್ಕೆ ದೂರು ನೀಡುತ್ತಿಲ್ಲವೇ? ಎಂಬ ಪ್ರಶ್ನೆ ಹಾಕಿಕೊಳ್ಳಬೇಕು ಎಂದ ಅವರು, ಉತ್ಪಾದಕರು ನಿಯಮಾನುಸಾರ ತಮ್ಮ ಉತ್ಪನ್ನಗಳ ಮೇಲೆ ಮುದ್ರಿಸಬೇಕಾದ ಅಂಶಗಳಿಗೆ ಸಂಬಂಧಿಸಿದಂತೆ, ಗುಣಮಟ್ಟ ಮತ್ತು ಸೇವೆಗೆ ಸಂಬಂಧಿಸಿದಂತೆ ಅನೇಕ ಲೋಪಗಳು ಇದ್ದರೂ ಗ್ರಾಹಕರು ಅದನ್ನು ಗಣನೆಗೆ ತೆಗೆದುಕೊಳ್ಳದೇ ವ್ಯಾಪಾರ, ವಹಿವಾಟು ಮಾಡುತ್ತಿರುವುದು ನಾವು ದಿನನಿತ್ಯ ನೋಡುತ್ತೇವೆ ಎಂದು ವಿಷಾದಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಗೋಖಲೆ ಫಾಳಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿದಿನ ನೂರಾರು ಪ್ರಕರಣಗಳನ್ನು ದಾಖಲಿಸಬಹುದು ಅಂತಹ ಸ್ಥಿತಿ ಮಾರುಕಟ್ಟೆಯಲ್ಲಿ ಇರುತ್ತದೆ. ಕಾನೂನು ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ಗ್ರಾಹಕರು ಪ್ರಶ್ನೆ ಮಾಡುವುದು, ಹೋರಾಟ ಮಾಡುವುದಕ್ಕೆ ತಯಾರಾಗಬೇಕು ಎಂದವರು ತಿಳಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಜ್ಯೋತಿ ರಾಧೇಶ್ ಜಂಬಿಗಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಗ್ರಾಹಕರು ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಖರೀದಿಸುವ ಉತ್ಪನ್ನಗಳಿಗೆ ನೇರವಾಗಿ ಈ ಆಯೋಗದಲ್ಲಿ ಅಹವಾಲು ದಾಖಲಿಸಬಹುದು ಮತ್ತು ಗ್ರಾಹಕರು ಖರೀದಿಸಿದ ವಸ್ತುಗಳಿಗೆ ಪಕ್ಕಾ ರಶೀದಿಗಳನ್ನು ಪಡೆಯಬೇಕು. ಆಗ ಮಾತ್ರ ಗ್ರಾಹಕರಿಗೆ ಆಯೋಗದಿಂದ ತಕ್ಕ ನ್ಯಾಯ ಮತ್ತು ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಸಂಚಾಲಕ ಪಿ. ಅಂಜನಪ್ಪ ಉಪನ್ಯಾಸ ನೀಡಿ ಮಾತನಾಡಿ, ಅನುಚಿತ ವ್ಯವಹಾರ, ವಂಚನೆಯಿಂದ ತೊಂದರೆಯಾಗಿ ನಷ್ಟವಾಗಿದ್ದರೆ, ಬೇಕಾಗಿರುವ ಸೇವೆ ಅಥವಾ ವಸ್ತುಗಳನ್ನು ಪಡೆಯಲು ಬೇಡವಾದ ಸೇವೆ ಅಥವಾ ವಸ್ತುಗಳನ್ನು ಪಡೆಯಲೇಬೇಕೆಂಬ ಕಡ್ಡಾಯ ಆಸೆ ಆಮಿಷಗಳನ್ನು ಒಡ್ಡುವುದು. ಪಡೆದ ವಸ್ತು ಅಥವಾ ಸೇವೆಯ ಪ್ರಮಾಣ, ಗುಣಮಟ್ಟ ಮಾದರಿ, ಶೈಲಿ, ಆಕಾರ ಮುಂತಾದವುಗಳಲ್ಲಿ ಕೊರತೆ ಅಥವಾ ನ್ಯೂನತೆಯಿರುವುದು. ಸುಳ್ಳು ಅಥವಾ ತಪ್ಪು ಮಾಹಿತಿ ನೀಡುವುದು, ಹಳೆಯದನ್ನು ಹೊಸತಂದು ನಂಬಿಸುವುದು, ಎಂಆರ್‌ಪಿಗಿಂತ ಹೆಚ್ಚಿನ ದರ ಪಡೆದರೆ ಗ್ರಾಹಕರು ದೂರು ನೀಡಿ ಪರಿಹಾರ ಪಡೆಯಬಹುದು ಎಂದು ತಿಳಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸೋಮಶೇಖರಪ್ಪ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು. ಆಹಾರ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಟಿ.ಪ್ರಕಾಶ್ ಪ್ರಾರ್ಥಿಸಿದರು. ಕಾನೂನು ಮಾಪನಶಾಸ್ತ್ರದ ಸಹಾಯಕ ನಿಯಂತ್ರಕ ಹೆಚ್.ಎಸ್.ರಾಜು ವಂದಿಸಿದರು.



# ದಾವಣಗೆರೆ ಜಿಲ್ಲಾಸ್ಪತ್ರೆ ವೈದ್ಯರ ನಿರ್ಲಕ್ಷ್ಯಸಲ್ಲದು

## ಗರ್ಭಿಣಿ-ಮಗು ಸಾವು: ಕೆಡಿಪಿ ಸಭೆಯಲ್ಲಿ ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ ಅಸಮಾಧಾನ



ದಾವಣಗೆರೆ, ಮಾ.16- ಜಿಲ್ಲಾಸ್ಪತ್ರೆ ಕಾರ್ಯವೈಖರಿ, ವೈದ್ಯರ ನಿರ್ಲಕ್ಷ್ಯದ ಬಗ್ಗೆ ಜಿ.ಪಂ. ಅಧ್ಯಕ್ಷರು, ಸ್ಥಾಯಿ ಸಮಿತಿ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಘಟನೆ ಜಿಲ್ಲಾ ಪಂಚಾಯ್ತಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಡೆಯಿತು.

ಹರಪನಹಳ್ಳಿ ತಾಲ್ಲೂಕಿನ ಕಾವ್ಯ ಎಂಬ ಯುವತಿ ಹಾಗೂ ಆಕೆಯ ಗರ್ಭದಲ್ಲಿದ್ದ ಮಗುವಿನ ಸಾವಿಗೆ ವೈದ್ಯರ ನಿರ್ಲಕ್ಷವೇ ಕಾರಣ ಎಂದು ಸಂಬಂಧಿಕರು ದೂರು ಸಲ್ಲಿಸಿರುವ ಬಗ್ಗೆ ಅಧ್ಯಕ್ಷೆ ಶಾಂತಕುಮಾರಿ ಸಭೆಯಲ್ಲಿ ಪ್ರಸ್ತಾಪಿಸಿ, ಸಾವಿಗೆ ಕಾರಣ ಪ್ರಶ್ನಿಸಿದರು. ಅಲ್ಲದೆ ಮೃತ ಯುವತಿಯ ಸಂಬಂಧಿ, ಜಿಲ್ಲಾ ಪಂಚಾಯ್ತಿ ಕಚೇರಿ ಸಿಬ್ಬಂದಿ ಪರಮೇಶ್ವರಪ್ಪನನ್ನು ಸಭೆಗೆ ಕರೆಯಿಸಿ ಅಧಿಕಾರಿಗಳ ಎದುರು ಘಟನೆ ಬಗ್ಗೆ ವಿವರಿಸುವಂತೆ ಹೇಳಿದರು.

ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯವೇ ಯುವತಿಯ ಸಾವಿಗೆ ಕಾರಣ ಎಂದು ಆರೋಪಿಸಿದ ಪರಮೇಶ್ವರಪ್ಪ ವೈದ್ಯರು, ನರ್ಸ್‌ಗಳ ಅತಿರೇಕದ ನಡವಳಿಕೆ ಬಗ್ಗೆ ದೂರಿದರು. ಈ ಬಗ್ಗೆ ಪೊಲೀಸ್ ದೂರು ಸಹ ದಾಖಲಾಗಿರುವುದಾಗಿ ಹೇಳಿದರು.

ಮೃತರ ಸಂಬಂಧಿಯ ಆರೋಪ ಅಲ್ಲಗೆಳೆದ ವೈದ್ಯರು, ತುಂಬು ಗರ್ಭಿಣಿಯಾಗಿದ್ದ ಯುವತಿ ಹರಪನಹಳ್ಳಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಂದಿದ್ದರು. ಅವರಿಗೆ ಬಿ.ಪಿ., ತೀವ್ರ ರಕ್ತಸ್ರಾವ ಇತ್ತು. ವೈದ್ಯರು ಸೂಕ್ತ ಚಿಕಿತ್ಸೆ ನೀಡಿದ್ದಾರೆ. ಹೆರಿಗೆ ವೇಳೆ ಪಿಟ್ಸ್ ಬಂದ ಕಾರಣ ತಾಯಿ-ಮಗು ಸಾವನ್ನಪ್ಪಿದ್ದಾರೆ. ಶವ ಪರೀಕ್ಷೆ ನಡೆಸಲಾಗಿದ್ದು, ವರದಿ ಬರಬೇಕಿದೆ ಎಂದು ಹೇಳಿದರು.

ಜಿ.ಪಂ. ಸಿಇಒ ಡಾ. ವಿಜಯಮಹಾಂತೇಶ್ ದಾನಮ್ಮನವರ್ ಮಾತನಾಡಿ, ಭಾನುವಾರವೂ ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡಬೇಕು. ಈ ಪ್ರಕರಣದ ಬಗ್ಗೆ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನೀವೂ ಸಹ ವಿವರವಾಗಿ ದೂರು ಬರೆದು ವೈದ್ಯಾಧಿಕಾರಿಗಳಿಗೆ ಕೊಡಿ ಎಂದು ಸಂಬಂಧಿಗೆ ಸೂಚಿಸಿದರು.

**1-5ನೇ ತರಗತಿ ನಡೆಸಿದರೆ ಕ್ರಮ:** 1 ರಿಂದ 5ನೇ ತರಗತಿ ಒಳಗಿನ ಮಕ್ಕಳಿಗೆ ತರಗತಿ ನಡೆಸುವ ಶಾಲೆಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವುದಾಗಿ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ತಿಳಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕಳೆದ ವರ್ಷಕ್ಕಿಂತ 1 ಸಾವಿರ ಹೆಚ್ಚು ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ ಎಂದಾಗ, ರಾಜ್ಯ ಮಟ್ಟದಲ್ಲಿ ಜಿಲ್ಲೆ 10 ರೊಳಗೆ ಸ್ಥಾನ ಪಡೆಯಬೇಕು, ಈ ನಿಟ್ಟಿನಲ್ಲಿ ಪ್ರಯತ್ನ ಕೈಗೊಳ್ಳಿ. ಶಾಲಾ ಮಕ್ಕಳಿಗೆ ಆಗಾಗ್ಗೆ ಕೋವಿಡ್ ಪರೀಕ್ಷೆ ನಡೆಸುವಂತೆ ಸಿಇಒ ಸೂಚಿಸಿದರು.

**8 ನ್ಯಾಯ ಬೆಲೆ ಅಂಗಡಿ ಅಮಾನತ್ತು, 3 ಪರವಾನಗಿ ರದ್ದು**

**ಪಡಿತರ ವಿತರಣೆಯಲ್ಲಿ ಲೋಪವೆಸಗಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ 8 ನ್ಯಾಯಬೆಲೆ ಅಂಗಡಿ ಪರವಾನಿಗೆ ಅಮಾನತ್ತುಗೊಳಿಸಿದ್ದು, 3 ನ್ಯಾಯಬೆಲೆ ಅಂಗಡಿಗಳ ಪರವಾನಗಿ ರದ್ದುಪಡಿಸಲಾಗಿದೆ ಎಂದು ಆಹಾರ ಇಲಾಖೆ ಸಹಾಯಕ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.**

**4912 ಅನರ್ಹ ಬಿಪಿಎಲ್ ಕಾರ್ಡ್ ರದ್ದು :** ಆಹಾರ ಇಲಾಖೆ ಸಹಾಯಕ ನಿರ್ದೇಶಕ ಸೈಯದ್ ಖಲೀಮುಲ್ಲಾ ಮಾತನಾಡಿ, ಜಿಲ್ಲೆಯಲ್ಲಿ ಈವರೆಗೆ 4912 ಅನಧಿಕೃತ ಬಿ.ಪಿ.ಎಲ್. ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ ಎಂದು ಹೇಳಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಪ್ರಸಕ್ತ ವರ್ಷ ನೊಂದಣಿಗೊಂಡ ನಾಲ್ಕು ಚಕ್ರ ವಾಹನಗಳ ಮಾಲೀಕರ ಹೆಸರು, ಆಧಾರ್ ಸಂಖ್ಯೆಯ ವಿವರ ಪಡೆದು, ಅಂತಹವರು ಬಿಪಿಎಲ್ ಕಾರ್ಡ್ ಹೊಂದಿದ್ದಲ್ಲಿ ಪತ್ತೆ ಹಚ್ಚಿ, ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯವನ್ನು ಆಹಾರ ಇಲಾಖೆ ಪ್ರಾರಂಭಿಸಿದೆ ಎಂದರು.

**ವಿಕಲಚೇತನರ ಬೇಡಿಕೆ ಆಧಾರದ ಸಮೀಕ್ಷೆ :** ಜಿಲ್ಲೆಯಲ್ಲಿ ವಿಕಲಚೇತನರಿಗೆ ಕೇವಲ ವಾಹನ, ಸಾಧನ ಸಲಕರಣೆ ನೀಡುತ್ತಿರುವುದು ಸರಿಯಲ್ಲ. ಗ್ರಾಮೀಣ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರ ನೆರವಿನೊಂದಿಗೆ, ಪ್ರತಿ ಗ್ರಾಮಗಳಲ್ಲಿ ವಿಕಲಚೇತನರ ಬೇಡಿಕೆಗಳು, ವಸತಿ ಸೌಕರ್ಯ, ವೃತ್ತಿ ತರಬೇತಿ, ಕೌಶಲ್ಯ ಮುಂತಾದ ಬೇಡಿಕೆ ಆಧಾರದ ಸಮೀಕ್ಷೆ ಕೈಗೊಂಡು, ವರದಿ ಪಡೆಯಬೇಕು. ಈ ವರದಿಯನ್ನು ಕ್ರೋಢೀಕರಿಸಿ, ಕ್ರಿಯಾ ಯೋಜನೆ ರೂಪಿಸುವಂತೆ ಸಿಇಒ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಸೂಚಿಸಿದರು.

ವಿಕಲಚೇತನರಿಗೆ ಆದಾಯ ತರುವಂತಹ ವೃತ್ತಿ ಆಧಾರಿತ ತರಬೇತಿ ಕೊಡಿಸುವುದು, ವಸತಿ ರಹಿತರಿಗೆ ಮನೆ ಒದಗಿಸುವುದು, ಸಾಲ ಸೌಲಭ್ಯ ನೀಡಿಕೆಗೆ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಸೌಲಭ್ಯವನ್ನು ಪದೇ ಪದೇ ಒಂದೇ ಫಲಾನುಭವಿಗೆ ನೀಡುವಂತಾಗಬಾರದು. ಕಳೆದ 10 ವರ್ಷಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ಪಟ್ಟಿ ಇಲಾಖೆಯಲ್ಲಿ ಲಭ್ಯವಿರಬೇಕು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶಶಿಧರ್ ಅವರಿಗೆ ಸೂಚನೆ ನೀಡಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಮನವಿಗೆ ಸ್ಪಂದಿಸಬೇಕು. ವಿನಾಕಾರಣ ಕಚೇರಿಗಳಿಗೆ ಅಲೆದಾಡಿಸಬಾರದು. ಪ್ರತಿ ಸೋಮವಾರ ಕಚೇರಿಯಲ್ಲಿ ಸಾರ್ವಜನಿಕರಿಗೆ ಲಭ್ಯವಿರುವಂತೆ ಸಿಇಒ ತಾಕೀತು ಮಾಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯಕ್, ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ವೀರಶೇಖರಪ್ಪ, ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಫಕ್ಕೀರಪ್ಪ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಲೋಕೇಶ್ವರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ 250 ಕೋಟಿ ರೂ. ನೀಡಲು ಸಿಎಂಗೆ ಮನವಿ



ದಾವಣಗೆರೆ, ಮಾ.16- ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ನಿಗಮಕ್ಕೆ 250 ಕೋಟಿ ರೂ.ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ ಎಂದು ಕರ್ನಾಟಕ ಅಲೆಮಾರಿ ಅಥವಾ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ತಿಳಿಸಿದರು.

ನಗರದ ಹೊರವಲಯದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅತೀ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಸರ್ಕಾರದ ವಿವಿಧ ಯೋಜನೆಗಳಡಿ ವಸತಿ ಸೌಲಭ್ಯಗಳನ್ನು ಒದಗಿಸಿ ಡೇರೆ ಮುಕ್ತ ರಾಜ್ಯವನ್ನಾಗಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದರು.

ರಾಜ್ಯದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಜನಸಂಖ್ಯೆ ಸುಮಾರು 70 ಲಕ್ಷದಷ್ಟಿದೆ. ನಿಗಮದಡಿಯಲ್ಲಿ 46 ಸಮುದಾಯಗಳು ಬರುತ್ತವೆ. ಅದರಲ್ಲಿ ಶೇಕಡ 95 ರಷ್ಟು ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ ಎಂದ ಅವರು, ನಿಗಮದೊಂದಿಗೆ ಹಿಂದುಳಿದ ಕಲ್ಯಾಣ ವರ್ಗಗಳ ಇಲಾಖೆ ಹಾಗೂ ಸರ್ಕಾರದ ನೆರವಿನೊಂದಿಗೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದ ಸಮೀಕ್ಷೆ ನಡೆಸಲಾಗುವುದು ಎಂದರು.

ಜಿಲ್ಲೆಯಲ್ಲಿ ಪಿಚ್ಚಗುಂಟ್ಲ, ಹೆಳವ, ಗೋಂಧಳಿ, ಭೈರಾಗಿ, ಗಾರುಡಿ, ಗೊಲ್ಲ ಅಥವಾ ಯಾದವ ಜನಾಂಗದವರಿದ್ದು, ಎಲ್ಲಾ ಸಮುದಾಯಗಳು ಒಗ್ಗಟ್ಟಾಗಿ ಸಂಘಟಿತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಹಾಗೂ ಸರ್ಕಾರದಿಂದ ದೊರೆಯುವ ಮೂಲಭೂತ ಸೌಕರ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದವರ ಪರಿಶೀಲನೆ ನಡೆಸಲು ಹಗರಿಬೊಮ್ಮನಹಳ್ಳಿಗೆ ತೆರಳಿದಾಗ ಅಲ್ಲಿರುವ ಬೈಲ ಪತ್ತಾರ್ ಜನಾಂಗದವರು ಇತ್ತ ಗುಡಿಸಲು ಅಲ್ಲದ ಅತ್ತ ಮನೆಯೂ ಅಲ್ಲದೇ ಡೇರೆ ಹಾಕಿ ವಾಸ ಮಾಡುತ್ತಿರುವುದನ್ನು ಕಂಡು ಬೇಸರವಾಯಿತು. ಈ ನಿಟ್ಟಿನಲ್ಲಿ ಸರ್ಕಾರದ ಜಾಗದಲ್ಲಿ ಈ ಜನಾಂಗದವರಿಗೆ ಸೂರು ನೀಡಬೇಕು. ಇಲ್ಲವೆಂದರೆ ಸರ್ಕಾರ ಖಾಸಗಿ ಜಾಗವನ್ನು ಖರೀದಿಸಿ ಮನೆ ಕಟ್ಟಿಸಿಕೊಡಬೇಕು ಎಂದು ಮನವಿ ಮಾಡಿದರು.

ಜಿ.ಪಂ. ಅಧ್ಯಕ್ಷೆ ಕೆ.ವಿ.ಶಾಂತಕುಮಾರಿ, ನಿಗಮದ ನಿರ್ದೇಶಕ ಕೆ.ಹೆಚ್.ಲಕ್ಷ್ಮಣ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗಂಗಪ್ಪ, ಗುಣ್ಣಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಪ್ರತಿಭಟನಾ ಮೆರವಣಿಗೆ

ದಾವಣಗೆರೆ: ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಖಾಸಗೀಕರಣ ವಿರೋಧಿಸಿ, ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿ ವತಿಯಿಂದ ಇಂದು ಬೆಳಿಗ್ಗೆ 11-30ಕ್ಕೆ ನಗರದ ಅಂಬೇಡ್ಕರ್ ವೃತ್ತದಿಂದ ಎಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಪೆಟ್ರೋಲ್, ಅಡುಗೆ ಅನಿಲ, ಬೇಳೆ- ಕಾಳುಗಳು, ಅಡುಗೆ ಎಣ್ಣೆ, ತರಕಾರಿಗಳು, ಸಾರಿಗೆ, ಗೃಹೋಪಯೋಗಿ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಏರಿಕೆಯಾಗುತ್ತಾ ಹೋಗುತ್ತಿವೆ. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಸರ್ಕಾರಗಳು ಅಭಿವೃದ್ಧಿ ಎಂಬ ಹೆಸರಿನಲ್ಲಿ ಖಾಸಗೀಕರಣ ಮಾಡಲು ಹೊರಟಿದೆ. ರೈತ- ಕಾರ್ಮಿಕ ವಿ ರೋ ಧಿ ಯಾ ದ ಕಾನೂನುಗಳನ್ನು ಜಾರಿಗೆ ಮಾಡಲು ಹೊರಟಿದೆ ಎಂದು ಖಂಡಿಸಿದ್ದಾರೆ.

## ಉಕ್ಕಡಗಾತ್ರಿ : ಬಯಲು ಜಂಗೀ ಕುಸ್ತಿ



ಮಲೇಬೆನ್ನೂರು, ಮಾ.16- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಬಯಲು ಜಂಗೀ ಕುಸ್ತಿ ಪಂದ್ಯಾವಳಿ ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಅಷ್ಟೇ ಅಲ್ಲದೆ, ಹೊರ ರಾಜ್ಯಗಳಿಂದಲೂ ಕುಸ್ತಿ ಪಟುಗಳು ಆಗಮಿಸಿದ್ದು, ಗೆಲುವಿಗಾಗಿ ಜಟ್ಟಿಗಳು ಸೆಣಸಾಟ ನಡೆಸಿದರು. ಬುಧವಾರ ಅಂತಿಮ ಹಂತದ ಕುಸ್ತಿಗಳು ಎಲ್ಲರ ಗಮನ ಸೆಳೆಯಲಿವೆ.

**ಹರಕೆ :** ಅಜ್ಜಯ್ಯನ ದೇವಸ್ಥಾನದಲ್ಲಿ 2 ದಿನ ಭಕ್ತರಿಂದ ವಿವಿಧ ಹರಕೆ ಸೇವೆಗಳು ನಡೆದವು.

## ಮಾಸ್ಕ್ ಧರಿಸದ ಪ್ರಯಾಣಿಕರಿಗೆ ಖಾಸಗಿ ಬಸ್ಸುಗಳಲ್ಲಿ ಪ್ರಯಾಣಕ್ಕೆ ಅವಕಾಶವಿಲ್ಲ

ದಾವಣಗೆರೆ, ಮಾ.16 - ಖಾಸಗಿ ಬಸ್ಸು ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಳ್ಳುವಂತೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘವು ವಿನಂತಿ ಮಾಡಿದೆ. ಖಾಸಗಿ ಬಸ್ಸುಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಜಿಲ್ಲಾಡಳಿತದ ಆದೇಶದ ಮೇರೆಗೆ ಮಾಸ್ಕ್ ಕಡ್ಡಾಯವಾಗಿ ಧರಿಸಿಕೊಂಡು ಪ್ರಯಾಣಿಸಬೇಕು. ಮಾಸ್ಕ್ ಧರಿಸದ ಪ್ರಯಾಣಿಕರಿಗೆ ಪ್ರಯಾಣಿಸಲು ಅವಕಾಶ ನೀಡಲಾಗುವುದಿಲ್ಲ ಎಂದು ಸಂಘದ ಕಾರ್ಯದರ್ಶಿ ಎಂ.ಆರ್.ಸತೀಶ್ ತಿಳಿಸಿದ್ದಾರೆ.


ಹುಟ್ಟುಹಬ್ಬದ ಶುಭಾಶಯಗಳು



17ನೇ ಮಾದರಿ ವಾರ್ಡ್‌ನ ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, ನಗರಸಭೆ ಮಾಜಿ ಅಧ್ಯಕ್ಷರೂ, ಅಭಿವೃದ್ಧಿಯ ಹರಿಕಾರರೂ, ಕ್ರೀಡಾಪಟುಗಳ ಕಣ್ಮಣಿಗಳೂ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರೂ ಆದ

ಶ್ರೀ ದಿನೇಶ್ ಕೆ. ಶೆಟ್ಟಿ

ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು.... ✦ ಅಜ್ಜಪ್ಪ ಪವಾರ್ ✦ ಪಂಚಪ್ಪ ತೇರದಾಳ್ ✦ ವಾಟಾಳ್ ನಾಗರಾಜ್ ✦ ವೆಂಕಟೇಶ್ ಎಂ. ✦ ದಾದಾಪೀರ್ ಕೆ. ✦ ಪಿಸಾಳೆ ಶ್ರೀಧರ್ ✦ ಪಿಸಾಳೆ ಗುರು ✦ ಪ್ರಶಾಂತ್ ✦ ವೀರೇಂದ್ರ ಬಿ. ✦ ಮಲ್ಲೇಶ್ ಕನ್ನವರ ✦ ಸಂತೋಷ್ ನಾಯ್ಡು ✦ ಪ್ರದೀಪ್ ಕನ್ನವರ ✦ ದೀಪಕ್ ✦ ಸುರೇಶ್ ಕನ್ನವರ ✦ ಆಶು ಸಾವಂತ್ ✦ ಶಂಕರ ಚವ್ಹಾಣ್ ✦ ಪರಶುರಾಮ್ ✦ ಉಮೇಶ್ ✦ ಕಿರಣ ✦ ಬಂಡಿವಾಡ ✦ ನಾಗರಾಜ್ ರಾಯ್ಕರ್ ✦ ಬಾಲಚಂದ್ರ ಪಿಸಾಳೆ ✦ ವೀರೇಶ್ ಮೆಡಿಕಲ್ಸ್ ✦ ಯುವರಾಜ್ ✦ ಶ್ರೀಕಾಂತ್ ಬಗರೆ ✦ ಮುಜಾಹಿದ್ ✦ ಪ್ರವೀಣ್ ✦ ಮೇಘರಾಜ್ ✦ ಕರಿಬಸಪ್ಪ ✦ ಗಂಗಾಧರ್ ✦ ಪ್ರವೀಣ್ ಫಾರ್ಮಾ ✦ ಪ್ರತಾಪ್

ರೈತರ ಬೀದಿ ಯುವಕರ ಸಂಘ ಹಾಗೂ ಪಿಸಾಳೆ ಕಾಂಪೌಂಡ್ ನಾಗರಿಕರು

ಅಮೂಲ್ಯವಾದ ನೀರನ್ನು ಮಿತವಾಗಿ ಬಳಸಿ. ಸ್ವಚ್ಛತೆಯನ್ನು ಕಾಪಾಡಿ. ಸಸಿ ನೆಟ್ಟು ಪರಿಸರ ಉಳಿಸಿ


# ಸಿ.ಡಿ. ಪ್ರಕರಣ : ಉತ್ತರ ಪಡೆಯಲ್ಲ ಎಂದ ಶಾಸಕ ಪರಮೇಶ್ವರ ನಾಯ್ಕ

**(1ನೇ ಪುಟದಿಂದ)** ರಾಸಲೀಲೆಗೆ ಭಯಪಟ್ಟುಕೊಂಡು ತಡೆಯಾಜ್ಞೆ ತಂದಿದ್ದಾರೆ, ಇವರಿಗೆ ಯಾವ ನೈತಿಕತೆ ಇದೆ, ಇಂತಹವರಿಂದ ಉತ್ತರ ಪಡೆಯಬಾರದೆಂದು ಪಕ್ಷದ ವೇದಿಕೆಯಲ್ಲಿ ನಿರ್ಧರಿಸಿದ್ದೇವೆ ಎಂದರು. ಇದರಿಂದ ಸಚಿವ ನಾರಾಯಣ ಗೌಡ ತಬ್ಬಿಬ್ಬಾಗಿ, ಏನು ಹೇಳಬೇಕೆಂದು ತೋಚದೆ, ಪಕ್ಕದಲ್ಲಿದ್ದ ಸಚಿವ ಡಾ. ಸುಧಾಕರ್ ಅವರ ಮುಖವನ್ನೊಮ್ಮೆ ನೋಡಿ ಕುಳಿತುಕೊಂಡರು.

ಪರಮೇಶ್ವರ್ ನಾಯ್ಕ ಅವರ ಹೇಳಿಕೆಯಿಂದ ಸಿಟ್ಟಿಗೆದ್ದ ಸಚಿವ ಬಸವರಾಜ ಬೊಮ್ಮಾಯಿ, ನಿಮಗೆ ಯಾವ ನೈತಿಕತೆ ಇದೆ, ನೀವು ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದಾಗ ಮಹಿಳಾ ಅಧಿಕಾರಿ ಮೇಲೆ ದೌರ್ಜನ್ಯ ನಡೆಸಿದ್ದೀರೆಂಬ ಆರೋಪದ ಮೇಲೆ ಸಚಿವ ಸ್ಥಾನ ಕಳೆದುಕೊಂಡಿರಿ, ಈಗ ಕತೆ ಹೇಳಲು ಬಂದಿದ್ದೀರಾ? ಎಂದು ಪರಮೇಶ್ವರ ನಾಯ್ಕ ಅವರನ್ನು ತರಾಟೆಗೆ ತೆಗೆದುಕೊಂಡರು.


ಸಚಿವ ರಮೇಶ್ ಜಾರಕಿಹೊಳಿ ಅವರು ರಾಸಲೀಲೆ ಪ್ರಕರಣದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದಾರೆ, ಆರು ಮಂದಿ ಹೆದರಿಕೆಯಿಂದ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ. ಸರ್ಕಾರ ರಾಸಲೀಲೆ ಪ್ರಕರಣದಿಂದ ಜನರ ನಂಬಿಕೆ ಕಳೆದುಕೊಂಡಿದೆ ಎಂದರು.

ಪರಮೇಶ್ವರ ನಾಯ್ಕ್ ಅವರು ಏರಿದ ಧ್ವನಿಯಲ್ಲಿ ಆಕ್ಷೇಪಿಸತೊಡಗಿದಾಗ ಬೊಮ್ಮಾಯಿ ಕೂಡಾ ಏರಿದ ಧ್ವನಿಯಲ್ಲಿ ಮುಗಿಬಿದ್ದರು.

ಪರಮೇಶ್ವರ ನಾಯ್ಕ್ ಅವರೇ, ನೀವು ಈ ಹಿಂದೆ ಸಚಿವರಾಗಿದ್ದಾಗ ಏನು ನಡೆಯಿತು ಎಂಬುದು ಎಲ್ಲರಿಗೂ ಗೊತ್ತು, ನಾವು ನಿಮ್ಮಿಂದ ನೈತಿಕತೆಯ ಪಾಠ ಕಲಿಯಬೇಕಿಲ್ಲ ಎಂದರು.

ಈ ಬೆಳವಣಿಗೆಯಿಂದ ಕ್ರುದ್ಧಗೊಂಡ ಸಭಾಧ್ಯಕ್ಷ ಕಾಗೇರಿ, ಇದೇ ಮೊದಲ ಬಾರಿ ತಾವು ಕುಳಿತಿದ್ದ ಪೀಠದಿಂದ ಎದ್ದು ನಿಂತು ಪರಮೇಶ್ವರ್ ನಾಯ್ಕ್ ಅವರನ್ನು ತರಾಟೆಗೆ ತೆಗೆದುಕೊಂಡರು.

## ಮಂಜುನಾಥ್‌ಗೆ ಡಾಕ್ಟರೇಟ್



ದಾವಣಗೆರೆ, ಮಾ.16- ಕುವೆಂಪು ವಿಶ್ವ ವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಎಸ್. ಮಂಜುನಾಥ್ ಅವರಿಗೆ ಕುವೆಂಪು ವಿಶ್ವ ವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿದೆ.

ಕುವೆಂಪು ವಿವಿ ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ. ಜೆ. ನಾರಾಯಣ್ ಮಾರ್ಗದರ್ಶನದಲ್ಲಿ ಮಂಡಿಸಿದ ಎಕಾಲಜಿಕಲ್ ಸ್ಟಡೀಸ್ ಆನ್ ಗುಡವಿ ಆಂಡ್ ಸರೌಂಡಿಂಗ್ ವೆಟ್ಲ್ಯಾಂಡ್ಸ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಹೈಡ್ರಾಲಾಜಿಕಲ್ ವೇರಿಯೇಬಲ್ಸ್ ಎಂಬ ವಿಷಯದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಿದೆ.




ಹುಟ್ಟುಹಬ್ಬದ ಶುಭಾಶಯಗಳು

17ನೇ ಮಾದರಿ ವಾರ್ಡ್‌ನ ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, ನಗರಸಭೆ ಮಾಜಿ ಅಧ್ಯಕ್ಷರೂ, ಅಭಿವೃದ್ಧಿಯ ಹರಿಕಾರರೂ, ಕ್ರೀಡಾಪಟುಗಳ ಕಣ್ಮಣಿಗಳೂ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರೂ ಆದ

ಶ್ರೀ ದಿನೇಶ್ ಕೆ. ಶೆಟ್ಟಿ

ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.

✦ ಹನುಮಂತಪ್ಪ ✦ ರೇವಣಸಿದ್ದಪ್ಪ ✦ ಪರಶುರಾಮಪ್ಪ ✦ ರಾಜೇಂದ್ರ ✦ ಅನಿಲ್ ಕುಮಾರ್ ✦ ಮಂಜುನಾಥ್ ಹೆಚ್.ಜಿ ✦ ಸಂತೋಷ್ ✦ ರವಿ ಕೀರ್ತಿ ✦ ಮಾಲತೇಶ್ ✦ ಕಿರಣ್ ✦ ಪ್ರಶಾಂತ್ ✦ ಮಲ್ಲಿಕಾರ್ಜುನ್ ✦ ಪ್ರದೀಪ್ ✦ ದರ್ಶನ್ ✦ ನವೀದ್ ✦ ಮಂಜುನಾಥ್ ✦ ಪ್ರವೀಣ್ ಗೋಳಸಂಗಿ ✦ ಪ್ರಜಾಯ್ ಗೋಳಸಂಗಿ ✦ ನವೀನ್ ✦ ನಟರಾಜ್ ✦ ಜಗದೀಶ್ ✦ ಲಕ್ಷ್ಮಣ್ ✦ ರಾಜು ✦ ನಾಗರಾಜ್ ✦ ಜೆಮ್ಸ್ ✦ ದೀಪಕ್ ✦ ಶಶಾಂಕ್ ✦ ಗೋಪಾಲ್ ✦ ಸಿರಿಲ್ ✦ ಪ್ರದೀಪ್

ವಜ್ರ ಫ್ರೆಂಡ್ಸ್ ಗ್ರೂಪ್, ಮುದ್ದಳ್ಳಿ ತೋಟ

P & T ಗೆಳೆಯರ ಬಳಗ

ಅಮೂಲ್ಯವಾದ ನೀರನ್ನು ಮಿತವಾಗಿ ಬಳಸಿ. ಸ್ವಚ್ಛತೆಯನ್ನು ಕಾಪಾಡಿ. ಸಸಿ ನೆಟ್ಟು ಪರಿಸರ ಉಳಿಸಿ






ಜನ್ಮ ದಿನದ ಹಾರ್ದಿಕ ಶುಭಾಶಯಗಳು






55ನೇ ವರ್ಷದ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಶ್ರೀ ದಿನೇಶ್ ಕೆ. ಶೆಟ್ಟಿಯವರಿಗೆ ಹಾರ್ದಿಕ ಶುಭಾಶಯಗಳು...

17ನೇ ವಾರ್ಡಿನ ಸಮಸ್ತ ನಾಗರಿಕರು ಹಾಗೂ ಪಿಸಾಳೆ ಕಾಂಪೌಂಡ್‌ನ ನಾಗರಿಕರು, ದಾವಣಗೆರೆ.

ಅಜ್ಜಪ್ಪ ಪವಾರ್

17ನೇ ವಾರ್ಡ್ ಕಾಂಗ್ರೆಸ್ ಅಧ್ಯಕ್ಷರು ಉಪಾಧ್ಯಕ್ಷರು, ಮರಾಠ ಸಮಾಜ ದಾವಣಗೆರೆ.

## ಎರೇಬೂದಿಹಾಳ್‌ನ ಗೌಡ್ರು ಷಡಾಕ್ಷರಪ್ಪ ನಿಧನ




ಹರಿಹರ ತಾಲ್ಲೂಕು ಎರೇಬೂದಿಹಾಳ್ ಗ್ರಾಮದ ಜಮೀನ್ದಾರರಾದ **ಶ್ರೀ ಗೌಡ್ರು ಸಣ್ಣ ಹನುಮಪ್ಪರ ಷಡಾಕ್ಷರಪ್ಪ** ಅವರು ದಿನಾಂಕ 16.03.2021ರ ಮಂಗಳವಾರ ರಾತ್ರಿ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.03.2021ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಎರೇಬೂದಿಹಾಳ್ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ : 99645 40555, 94813 44313






























JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte